ಸಂಪುಟ 01 | ಸಂಚಿಕೆ 158 | ಶುಕ್ರವಾರ 01 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಅಂತರರಾಷ್ಟ್ರೀಯ ಕಾರ್ಮಿಕ ದಿನ**

ಅಂತರರಾಷ್ಟ್ರೀಯ ಕಾರ್ಮಿಕ ದಿನವನ್ನು ಕಾರ್ಮಿಕ ದಿನ ಅಥವಾ ಮೇ ದಿನ ಎಂದೂ ಕರೆಯುತ್ತಾರೆ. ಇದನ್ನು ಪ್ರತಿ ವರ್ಷ ಮೇ 1 ರಂದು ಜಾಗತಿಕವಾಗಿ ಆಚರಿಸಲಾಗುತ್ತದೆ. ಭಾರತದಲ್ಲಿ, ಕಾರ್ಮಿಕ ದಿನವನ್ನು ಅಂತರರಾಷ್ಟ್ರೀಯ ಶ್ರಮಿಕ ದಿವಸ್ ಅಥವಾ ಕಾಮಗರ್ ದಿನ ಎಂದು ಕರೆಯಲಾಗುತ್ತದೆ.

**2) ಮಹಾರಾಷ್ಟ್ರ ದಿನ**

ಇದನ್ನು ಮರಾಠಿಯಲ್ಲಿ ಮಹಾರಾಷ್ಟ್ರ ದಿವಸ್ ಎಂದೂ ಕರೆಯುತ್ತಾರೆ. ಇದು ಮಹಾರಾಷ್ಟ್ರದಲ್ಲಿ ರಾಜ್ಯ ರಜಾದಿನವಾಗಿದೆ. ಬಾಂಬೆ ರಾಜ್ಯದ ವಿಭಜನೆಯಿಂದ ಮಹಾರಾಷ್ಟ್ರ ರಾಜ್ಯವು ಮೇ 1, 1960 ರಂದು ರಚನೆಯಾಯಿತು.

**3) ಗುಜರಾತ್ ದಿನ**

ಗುಜರಾತ್‌ನಲ್ಲಿ ಇಂದು ಸರ್ಕಾರಿ ರಜಾದಿನವಾಗಿದೆ. ಗುಜರಾತ್ ರಾಜ್ಯವು 1 ಮೇ 1960 ರಂದು ರಚನೆಯಾಯಿತು.

## ಸುಭಾಷಿತ

ಈ ಬದುಕು ಸರಳವಾಗಿದೆ. ಆದರೆ ನಾವು ಹಟ ಹಿಡಿದು ಅದನ್ನು ಜಟಿಲಗೊಳಿಸುತ್ತೇವೆ.

–ಕನ್‌ಫ್ಯೂಷಿಯಸ್

## ಬೆಂಗಳೂರಿನಾದ್ಯಂತ ಕಾಂಪೌಂಡ್ ಗಳ ಪಕ್ಕ ಇರುವ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಸೂಚನೆ

# ಡಿಸಿಎಂ ಡಿ.ಕೆ ಶಿವಕುಮಾರ್

**ಬೆಂಗಳೂರು: ಇಡೀ ಬೆಂಗಳೂರಿನಾದ್ಯಂತ ಅಪಾಯಕಾರಿ ಯಾಗಿರುವ ಕಾಂಪೌಂಡ್ ಗಳ ಪಕ್ಕ ಇರುವ ಬೀದಿ ಬದಿ ವ್ಯಾಪಾ–ರಿಗಳನ್ನು ತೆರವುಗೊಳಿಸಿ ಎಂದು ಸೂಚನೆ ನೀಡಲಾಗಿದೆ. ಇಂತಹ ಪ್ರದೇಶಗಳನ್ನು ಗುರುತಿಸಿ ಎಂದು ಈಗಾಗಲೇ ಅಧಿಕಾ–ರಿಗಳಿಗೆ ಸೂಚಿಸಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.**



ವಿಧಾನಸೌಧದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಗುರುವಾರದಂದು ಪ್ರತಿಕ್ರಿಯೆ ನೀಡಿದರು. ಅಧಿಕಾರಿಗಳ ನಿರ್ಲಕ್ಷ್ಯದಿಂದ ಅವಘಡ ಸಂಭವಿಸಿದೆಯೇ ಎಂದು ಕೇಳಿದಾಗ, "ಈ ದುರ್ಘಟನೆ ಸಂಭವಿಸಬಾರದಿತ್ತು, ಆದರೂ ಸಂಭವಿಸಿದೆ ಯಾವ ಅಧಿಕಾರಿಗಳ ನಿರ್ಲಕ್ಷ್ಯ ಎಂದು ನಾನು ಹೇಳುವುದಿಲ್ಲ. ವಾಜಪೇಯಿ (ಬೌರಿಂಗ್) ಆಸ್ಪತ್ರೆಯ ಕಾಂಪೌಂಡ್ ಪಕ್ಕದಲ್ಲಿ ಮಣ್ಣಿನ ರಾಶಿ ಹಾಕಿದ್ದಾರೆ. ಇದರ ಒತ್ತಡ ತಾಳಲಾರದೆ ಕಾಂಪೌಂಡ್ ಕುಸಿದಿದೆ. ಈ ರಸ್ತೆಯಲ್ಲಿಯೂ ಯಾವ ವ್ಯಾಪಾರಿಗಳನ್ನು ಕೂರಿಸಬಾರದು ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ ಎಂದರು.

ಬೆಂಗಳೂರಿನ ಎಲ್ಲಾ ರಸ್ತೆಗಳಲ್ಲಿ ಇರುವ ದುರ್ಬಲ ಮರಗಳು, ಕೊಂಬೆಗಳನ್ನು ಕತ್ತರಿಸಲಾಗುವುದು. ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಇದರ ಬಗ್ಗೆ ಪೊಲೀಸ್ ಹಾಗೂ ಬಿಬಿಎ ಅಧಿಕಾ–ರಿಗಳು ಕೆಲಸ ಮಾಡಿ ಪಟ್ಟಿ ತಯಾರಿಸಿದ್ದಾರೆ. ಮಳೆಹಾನಿ ತಡೆಗೆ ಕಂಟ್ರೋಲ್ ರೂಮ್ ಸಹ ಅಣಿಯಾಗಿದೆ. ಅಧಿಕಾರಿಗಳು ಸಹ ಕಾರ್ಯಪ್ರವೃತ್ತರಾಗಿದ್ದಾರೆ ಎಂದು ತಿಳಿಸಿದರು. ಹವಾಮಾನ ಇಲಾಖೆಯವರು ಈ ವರ್ಷ ಮಳೆ ಕಡಿಮೆ ಬರುತ್ತದೆ ಎಂದು ಹೇಳಿದ್ದಾರೆ. ಇದರಿಂದ ಆಣೆಕಟ್ಟುಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಲಿದೆ. ನಂತರ ವಿದ್ಯುತ್ ಉತ್ಪಾದನೆ ಕುಸಿಯಲಿದೆ.

ನಾನು ನಾಡಿದ್ದು ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡುತ್ತಿದ್ದೇನೆ. ಅಲ್ಲಿ ಎಲ್ಲಾ ಗೇಟ್ ಬದಲಿ ಕಾರ್ಯ ಮುಕ್ತಾಯವಾಗಿದ್ದು, ನೀರಿನ ಶೇಖರಣೆ ಆರಂಭಿಸಬೇಕಿದೆ. ಇನ್ನು ಕಾವೇರಿ ನೀರಿನ ವಿಚಾರದಲ್ಲಿ 177 ಟಿಎಂಸಿ ನೀರು ಹರಿಸಲೇಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಈ ಕಾರಣಕ್ಕೆ ಮಳೆ ಚೆನ್ನಾಗಿ ಬರಲಿ ಎಂದು ನಾನು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹೆಚ್ಚಿನ ಮಳೆ ಬಂದರೆ ಅದನ್ನು ಎದುರಿಸಲು ಈಗಾಗಲೇ ಸಿದ್ಧತೆಯನ್ನು ಮಾಡಿಕೊಂಡಿದ್ದೇವೆ ಎಂದು ಹೇಳಿದರು. ಆದಷ್ಟು ಬೇಗ ಅಧಿಕಾರ ಹಂಚಿಕೆ ಗೊಂದಲ ಬಗೆಹರಿಸುವಿರಾ, ಮಲ್ಲಿಕಾರ್ಜುನ ಖರ್ಗೆ ಅವರು ಬದಲಾವಣೆ ಇಲ್ಲ ಎಂದಿದ್ದಾರೆ ಎಂದು ಕೇಳಿದಾಗ, "ಗೊಂದಲವೇ ಇಲ್ಲ. ನೀವುಗಳು ಏನಿದ್ದರೂ ಮಲ್ಲಿಕಾರ್ಜುನ ಖರ್ಗೆ ಸಾಹೇಬರನ್ನು ಕೇಳಿ. ನಾಯಕತ್ವ ಬದಲಾವಣೆ ವಿಚಾರದಲ್ಲಿ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಇದು ಪಕ್ಷ ಹೈಕಮಾಂಡ್ ಗೆ ಬಿಟ್ಟ ವಿಚಾರ ಅವರು ತೀರ್ಮಾನ ಮಾಡುತ್ತಾರೆ" ಎಂದರು.

## ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗಿದ್ದ ಕೂಲಿ ಕಾರ್ಮಿಕ ಅಂಬಣ್ಣ ಸಾವು, ಪರಿಹಾರಕ್ಕೆ ಕೆಪಿಆರ್ ಎಸ್ ಒತ್ತಾಯ

ನೈಜ್ಯ ದೆಸೆ ನ್ಯೂಸ್

ತಾಲ್ಲೂಕಿನ ಮುಳ್ಳೂರು ಕ್ಯಾಂಪಿನ ನಿವಾಸಿ ಅಂಬಣ್ಣ (62) ಬುಧವಾರ ಮಧ್ಯಾಹ್ನ ಉದ್ಯೋಗ ಖಾತ್ರಿ ಯೋಜನೆಯ ಕೆಲಸ ಮಾಡುವ ಸಮಯದಲ್ಲಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಬೆಳಿಗ್ಗೆ 10 ಗಂಟೆಗೆ ಕೆಲಸ ಪ್ರಾರಂಭ ಮಾಡುವ ಪೂರ್ವದಲ್ಲಿ ಫೋಟೋ ತೆಗೆದು ಕೆಲಸಕ್ಕೆ ಹಾಜರು ಪಡಿಸಿಕೊಂಡಿದ್ದರು.



ನಂತರ ಕಾಲುವೆ ಕೆಲಸದ ಯೋಜನೆಯಲ್ಲಿ ತೊಡಗಿ–ಕೊಂಡಿದ್ದರು. ಆದರೆ ಮಧ್ಯಾಹ್ನ 12 ಗಂಟೆಗೆ ಫೋಟೋ ತೆಗೆಸಿಕೊಳ್ಳುವ ಪೂರ್ವದಲ್ಲಿ ಏಕಾಏಕಿ ಕುಸಿದು ಬಿದ್ದು ಅಂಬಣ್ಣ ಸಾವನ್ನಪ್ಪಿದ್ದಾರೆ. ಪರಿಹಾರಕ್ಕೆ ಒತ್ತಾಯ: ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಮೃತಪಟ್ಟಿರುವುದರಿಂದ ಮೃತ ಅಂಬಣ್ಣ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರ ಸೂಕ್ತ ಪರಿಹಾರ ನೀಡಬೇಕು. ಮುಂದೆ ಇಂತಹ ಘಟನೆಗಳು ನಡೆಯದಂತೆ ನೆರಳಿನ ವ್ಯವಸ್ಥೆ, ಕುಡಿಯುವ ನೀರು ಸೇ–ರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಬಸವಂತರಾಯಗೌಡ ಕಲ್ಲೂರು ಒತ್ತಾಯಿಸಿದ್ದಾರೆ.

# ಸತತ ಪರಿಶ್ರಮವೇ ಯಶಸ್ವಿಯ ಮೆಟ್ಟಿಲು: ಡಾ.ಮಹಾಂತಗೌಡ ಪಾಟೀಲ್




ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದಲ್ಲಿರುವ ದೇವಾನಾಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ **2025–26 ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ನಡೆಯಿತು. ಉದ್ಘಾಟನೆಯನ್ನು ಹಿರಿಯ ಉಪನ್ಯಾಸಕ ರಂಗಯ್ಯ ಶೆಟ್ಟಿ ನೆರವೇರಿಸಿ, ಮಾತನಾಡುತ್ತಾ ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳಬೇಕು.**

ಆಗ ಶಿಕ್ಷಣ ತಾನೇ ಮೈಗೂಡುತ್ತದೆ, ಶಿಸ್ತು ಮತ್ತು ಶಿಕ್ಷಣ ವಿದ್ಯಾರ್ಥಿಗಳಿಗೆ ತುಂಬಾ ಅವಶ್ಯ ಎಂದು ಹೇಳಿದರು. ನಂತರ ಡಾ.ಮಹಾಂತಗೌಡ ಪಾಟೀಲ ಪ್ರಾಂಶುಪಾಲರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ವಿದ್ಯಾರ್ಥಿಗಳು ಗುರಿ ಸಾಧಿಸಬೇಕಾದರೆ ನಿರಂತರ ಕಠಿಣ ಪರಿಶ್ರಮ, ಗುರು ಹಿರಿಯರಿಗೆ ಗೌರವ ಕೊಡುವುದರ ಮೂಲಕ ಸಮಾಜದಲ್ಲಿ ಆದರ್ಶ ಪ್ರಾಯರಾಗಿ ಬದುಕಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ.ಕೃಷ್ಣಕುಮಾರ ಮ್ಯಾಳ ಪ್ರಾಚಾರ್ಯರು, ಡಾ.ರಾಮಣ್ಣ ಎ ಹಿರಿಯ ಪ್ರಾಧ್ಯಾಪಕರು,ಡಾಬಸವರಾಜ ತಡಕಲ ಹಿರಿಯ ಪ್ರಾಧ್ಯಾಪಕರು, ಶ್ರೀಮತಿ ರೋಹಿಣಿ ಮೂರ್ತಿ, ಇಮಾಮಸಾಬ ಸಂಯೋಜಿ–ಕರು ಸಂಸ್ಕೃತಿಕ ವಿಭಾಗ, ಡಾ. ವಿರುಪನಗೌಡ ಅಧ್ಯಕ್ಷರು ಅತಿಥಿ ಉಪನ್ಯಾಸಕರ ಸಂಘ, ರಂಜಾನ್ ಸಾಬ ಉಳ್ಳಾಗಡ್ಡಿ ರಂಗಕರ್ಮಿ ವೇದಿಕೆ ಮೇಲೆ ಇದ್ದರು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಇದ್ದರು. ನಂತರ ಅವ್ವ ನಾಟಕ ಪ್ರದರ್ಶನ ನಡೆಯಿತು.

# JEE ಆನಂದಸ್ವಾಮಿಗೆ ಗೌರವ ಸಮರ್ಪಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆ. ಆರ್.ಐ.ಡಿ.ಎಲ್) ಇದರ ಬ.ಬಾಗೇವಾಡಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಆನಂದಸ್ವಾಮಿ ಇವರನ್ನು ಚಬನೂರ ಗ್ರಾಮಸ್ಥರಿಂದ ಸನ್ಮಾನಿಸಲಾಯಿತು.**



ಇತ್ತೀಚಿಗೆ ಚಬನೂರ ಗ್ರಾಮದಲ್ಲಿ ಇಲಾಖೆಯ ವಿವಿಧ ಕಾಮಗಾರಿಗಳನ್ನು ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲರು ಚಾಲನೆ ನೀಡಲು ಆಗಮಿಸಿದ ಸಂದರ್ಭದಲ್ಲಿ ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಆನಂದಸ್ವಾಮಿ ಇವರಿಗೆ ದಕ್ಷ ಸೇವೆಗಾಗಿ ಈ ಸನ್ಮಾನ ನೀಡಲಾಯಿತು. ಜ್ಯೋತಿಷ್ಯ ರತ್ನ ಪರಮಪೂಜ್ಯ ಶ್ರೀರಾಮಲಿಂಗಯ್ಯ ಮಹಾಸ್ವಾಮಿಗಳು ಸಮಾರಂಭದ ಸಾನಿಧ್ಯ ವಹಿಸಿದ್ದರು.

ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ,ತಾಪಂ ಇಒ ಅನಸೂಯಾ ಚಲವಾದಿ,ವಿಲಾಸ ರಾಠೋಡ, ಮುಖಂಡರಾದ ರುದ್ರಗೌಡ ಪಾಟೀಲ,ಸಂಗನಗೌಡ ಪಾಟೀಲ, ಬಸವರಾಜ ಡೆಂಗಿ, ಮಡುಸೌಕಾರ ಬಿರಾದಾರ,ಮಲ್ಲನಗೌಡ ಬಿರಾದಾರ,ಸಾಹೇಬಗೌಡ ಬಿರಾದಾರ, ಸಿದ್ದು ಹಿರೇಕುರುಬರ, ಯಮನೂರಿ ಒಡೆಯರ್, ತಿಪ್ಪಣ್ಣ ಹಿರೇಕುರುಬರ, ರಾಮನಗೌಡ ಚೌದ್ರಿ,ಸಿದ್ದು ಸಿಂಧನಕೇರಿ, ಸಿದ್ದರಾಯ ಹಿರೇಕುರುಬರ, ಪ್ರಕಾಶ ಪಡಶೆಟ್ಟಿ, ಸಿದ್ದು ಅವಟಿ ಇದ್ದರು.

# ಬಿಎಸ್ ವೈ 50ನೇ ವರ್ಷದ ಅಭಿಮಾನೋತ್ಸವ, ಪದವಿದರರ ಚುನಾವಣೆಯ ಪೂರ್ವಭಾವಿ ಸಭೆ

ನೈಜ್ಯ ದೆಸೆ ನ್ಯೂಸ್

**ನಗರದ ಬಿಜೆಪಿ ಕಚೇರಿಯಲ್ಲಿ ಎನ್. ರವಿಕುಮಾರ್ ಇವರ ನೇತೃತ್ವದಲ್ಲಿ ಜರುಗಿದ ನಿಕಟ ಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ 50ನೇ ವರ್ಷದ ಅಭಿಮಾನೋತ್ಸವ ಹಾಗೂ ಕ್ಷೇತ್ರ ಪದವಿದರರ ಚುನಾವಣೆ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಕೆ.ಕರಿಯಪ್ಪ ಭಾಗವಹಿಸಿ ಅಭಿಮಾನೋತ್ಸವ ಕಾರ್ಯಕ್ರಮದ ಕು–ರಿತು ಸಲಹೆ ಸೂಚನೆಗಳು ನೀಡಿದರು.**




ಈ ಸಂದರ್ಭದಲ್ಲಿ: ಜಿಲ್ಲಾ ಅಧ್ಯಕ್ಷ ವೀರನಗೌಡ ಪಾಟೀಲ್ ಲೆಕ್ಕಿಹಾಳ, ವಿಧಾನ ಪರಿಷತ್ ಸದಸ್ಯ ಸುಶೀಲ್ ನಮೋಶಿ, ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ್, ತಿಪ್ಪರಾಜ್ ಹವಾಲ್ದಾರ್, ಗ್ರಾಮೀಣ ಮಂಡಲದ ಅಧ್ಯಕ್ಷ ಯಂಕೋಬ ನಾಯಕ್ ರಾಮತ್ನಾಳ್, ನಗರ ಮಂಡಲ ಅಧ್ಯಕ್ಷ ಸಿದ್ದರಾಮೇಶ ಮನ್ನಾಪುರು, ಮುಖಂಡರಾದ ಸಿರಾಜ್ ಪಾಷಾ, ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ್ ರಾಜು ಗುರು, ಸೇರಿದಂತೆ ಅನೇಕ ಮುಖಂಡರು, ಪದಾಧಿಕಾರಿಗಳು ಕಾರ್ಯಕರ್ತರು ಉಪಸ್ಥಿತರಿದ್ದರು.

# ತುರ್ವಿಹಾಳ ವಾರ್ಡ್ ನಂ 10ರ ನಿವಾಸಿಗಳಿಗೆ ಪಟ್ಟಾ ನೀಡಲು ಒತ್ತಾಯಿಸಿ ಸಿಪಿಐಎಂ ನಿಂದ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ತುರ್ವಿಹಾಳ ವಾರ್ಡ್ ನಂ–10ರಲ್ಲಿ ವಾಸವಿರುವ ನಿವಾಸಿಗಳಿಗೆ ಪಟ್ಟಾ ನೀಡಬೇಕು. ಕುಷ್ಟಗಿ ಮುಖ್ಯ ರಸ್ತೆಯ ಪಕ್ಕದಲ್ಲಿ ವಾಸಿಸುವ ಜನ–ರಿಗೆ ಕುಡಿಯುವ ನೀರು, ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಲು ಒತ್ತಾಯಿಸಿ, ಇಂದು ತುರ್ವಿಹಾಳ ಪಟ್ಟಣ ಪಂಚಾಯತಿ ಅಧ್ಯಕ್ಷ–ರಿಗೆ ಹಾಗೂ ಮುಖ್ಯಾಧಿಕಾರಿಗಳಿಗೆ 10ನೇ ವಾರ್ಡಿನ ನಿವಾಸಿಗಳು ಮನವಿ ಪತ್ರ ಸಲ್ಲಿಸಿದರು.**




ತಾಲೂಕಿನ ತುರ್ವಿಹಾಳ ಪಟ್ಟಣದ ವಾರ್ಡ್ ನಂ–10 ರಲ್ಲಿ 20 ವರ್ಷಗಳಿಂದ ಕೃಷಿ ಕೂಲಿಕಾರರು ವಾಸ ಮಾಡುತ್ತಿದ್ದು, ವಾಸವಾಗಿರುವ ಸ್ಥಳಕ್ಕೆ ಪಟ್ಟಾ ನೀಡುವಂತೆ ಶಾಸಕರಲ್ಲಿ ಮತ್ತು ಪಟ್ಟಣ ಪಂಚಾಯತಿಗೆ ಹಲವು ಬಾರಿ ಮೌಖಿಕವಾಗಿ ಹಾಗೂ ಮನವಿ ಪತ್ರ ಸಲ್ಲಿಸಿದರು ಇದೂವರೆಗೂ ವಾಸವಿರುವ ಜನರಿಗೆ ಪಟ್ಟಾ ಸಿಕ್ಕಿಲ್ಲ. ಜನವರಿ 9 ರಂದು ಈ ಕುರಿತು ಪಟ್ಟಣ ಪಂಚಾಯತಿಗೆ ಮನವಿ ಪತ್ರ ಸಲ್ಲಿಸಿದಾಗ ಈ ಕುರಿತು ಶಾಸಕರ ಜೊತೆಗೆ ಸಮಾಲೋಚಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಭರವಸೆಯನ್ನು ಮುಖ್ಯಾಧಿಕಾರಿಗಳು ನೀಡಿದ್ದರು.

ಈಗಾಗಲೇ ಮೂರು ತಿಂಗಳು ಕಳೆದರೂ ಯಾವುದೇ ಸ್ಪಂದನೆ ಸಿಕ್ಕಿಲ್ಲವೆಂದು ವಾರ್ಡಿನ ನಿವಾಸಿಗಳು ಇಂದು ಸಿಪಿಐಎಂ ಪಕ್ಷದ ನೇತೃತ್ವದಲ್ಲಿ ಪಟ್ಟಣದ ಹಮಾಲಿ ಕಚೇರಿಯಿಂದ ಮೆರವಣಿಗೆಯ ಮೂಲಕ ಆಗಮಿಸಿ ತುರ್ವಿಹಾಳ ಪಟ್ಟಣ ಪಂಚಾಯತಿ ಅಧ್ಯಕ್ಷರಿಗೆ ಹಾಗೂ ಮುಖ್ಯಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಇದೇ ವೇಳೆ ಜಿಲ್ಲಾ ಮುಖಂಡ ನರಸಣ್ಣ ನಾಯಕ ಮಾತನಾಡಿ, 20 ವರ್ಷಗಳಿಂದ ವಾಸಿಸುವ ಜನರಿಗೆ ಪಟ್ಟಾ ನೀಡಬೇಕು.

ಆಶ್ರಯ ಯೋಜನೆ ಅಡಿಯಲ್ಲಿ ಎಲ್ಲರಿಗೂ ವ್ಯವಸ್ಥೆ ಮಾಡಬೇಕು ಇಲ್ಲದೆ ಇದ್ದಲ್ಲಿ ಜಿಲ್ಲಾ ಮಟ್ಟದಲ್ಲಿ ಹೋರಾಟ ಮಾಟಡಲಾಗುವುದು ಎಂದರು.

ಈ ಸಂದರ್ಭದಲ್ಲಿ: ಎಸ್.ದೇವೇಂದ್ರಗೌಡ, ವೀರೇಶ ತುರ್ವಿಹಾಳ, ಬಸವಂತರಾಯಗೌಡ ಕಲ್ಲೂರು, ಎಂ.ಗೋಪಾಲಕೃಷ್ಣ, ಹನುಮಂತ, ನಾಗರತ್ನಮ್ಮ, ಮಲ್ಲಮ್ಮ ಮಡಿವಾಳ, ಹೊನ್ನಮ್ಮ, ಭಾಗವಹಿಸಿದ್ದರು.

## ಸಾಹಿತ್ಯ ಸಿಂಚನ

ಶಿಕ್ಷಣ

ಅಕ್ಷರ ಕಲಿಯದ ಕಣ್ಣಿಗೆ
ಲೋಕವೆಲ್ಲಾ ಕತ್ತಲೆ
ಅಕ್ಷರ ತಿಳಿದ ಮನಸ್ಸಿಗೆ
ಜಗವೇ ಬೆಳಕಿನ ಹಬ್ಬವೇ

ಬಡತನದ ಮನೆಯಲ್ಲೂ
ಶಿಕ್ಷಣವೆಂಬ ದೀಪ ಹಚ್ಚಿದರೆ
ಕನಸಿನ ಬಾಗಿಲು ತೆರೆಯುತ್ತೆ
ಬದುಕಿಗೆ ಹೊಸ ದಾರಿ ಸಿಗುತ್ತೆ

ಮಾರ್ಕ್ಸ್ ಕಡಿಮೆ ಆದ್ರೂ ಚಿಂತೆ ಬೇಡ
ಕಲಿಕೆ ನಿಲ್ಲಿಸಬೇಡ ಗೆಳೆಯ
ಅಂಕಪಟ್ಟಿಗಿಂತ ದೊಡ್ಡದು
ಬದುಕು ಕಲಿಸುವ ಪಾಠವೇ

ಶಾಲೆಯ ಬೆಂಚು ಹೇಳಿಕೊಡುತ್ತೆ
ಸ್ನೇಹದ, ತ್ಯಾಗದ ಮೌಲ್ಯವ
ಗುರುವಿನ ಬೆತ್ತವಲ್ಲ, ಮಾತು
ತಿದ್ದಿ ತೀಡಿ ಮನುಜ ಮಾಡುತ್ತೆ

ಮೊಬೈಲ್ ಗೇಮ್ ಆಡೋ ಕೈಯಲ್ಲಿ
ಒಂದು ಪುಸ್ತಕ ಹಿಡಿದರೆ ಸಾಕು
ನಾಳಿನ ನಿನ್ನ ಭವಿಷ್ಯವೇ
ಬದಲಿಸುವ ಶಕ್ತಿ ಅದಕ್ಕಿದೆ

ಶಿಕ್ಷಣವೆಂಬ ಆಯುಧವಿರಲು
ಯಾವ ಯುದ್ಧವೂ ಕಷ್ಟವಲ್ಲ
ಓದು, ಬರೆ, ಪ್ರಶ್ನೆ ಕೇಳು
ಉಸಿರು ಇರುವ ತನಕ ಕಲಿ

ಎಸ್. ದುರಗಪ್ಪ. ಕುಷ್ಟಗಿ.

## ಮೇ.02ರಂದು ಗ್ರಾಮೀಣ ಭಾಗದಲ್ಲಿ ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 110/11 ಕೆವಿ ಯರಗೇರಾ ವಿದ್ಯುತ್ ಉಪ-ಕೇಂದ್ರದ ಮಿಡಗಲದಿನ್ನಿ, ವೈ.ಮಲ್ಲಾಪುರ, ಎಲ್.ಕೆ.ದೊಡ್ಡಿ,**




ಜಂಬಲದಿನ್ನಿ ಫೀಡರ್‌ಗಳಲ್ಲಿ ತುರ್ತು ನಿರ್ವಹಣ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮೇ.02ರ ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 05ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿವಿಧ ದಿನಾಂಕಗಳಂದು ಜೆಸ್ಕಾಂ ಗ್ರಾಹಕರ ಕುಂದು ಕೊರೆತೆ ಸಭೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕಿನ ಜೆಸ್ಕಾಂ ಉಪ ವಿಭಾಗಳಲ್ಲಿ ಗ್ರಾಹಕರ ಕುಂದು ಕೊರೆತೆ ತ್ರೈಮಾಸಿಕ ಸಭೆಯನ್ನು ಜೆಸ್ಕಾಂ ಅಧೀಕ್ಷಕ ಅಭಿಯಂತರರ ಅಧ್ಯಕ್ಷತೆಯಲ್ಲಿ ವಿವಿಧ ದಿನಾಂಕಗಳಂದು ಹಮ್ಮಿಕೊಳ್ಳಲಾಗಿದ್ದು, ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಹಾಜರಾಗಿ ತಮ್ಮ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ ಎಂದು ಕೋರಲಾಗಿದೆ.**

ಮೇ.06ರ ಬೆಳಿಗ್ಗೆ 9ಗಂಟೆಗೆ ಮಸ್ಕಿ, ಮೇ.11ರ ಬೆಳಿಗ್ಗೆ 9ಕ್ಕೆ ದೇವದುರ್ಗ, ಮೇ.14ರ ಬೆಳಿಗ್ಗೆ 9ಕ್ಕೆ ಲಿಂಗಸುಗೂರು ಹಾಗೂ ಮೇ.16ರ ಬೆಳಿಗ್ಗೆ 9ಕ್ಕೆ ಸಿರವಾರದಲ್ಲಿ ಗ್ರಾಹಕರ ಕುಂದು ಕೊರೆತೆ ತ್ರೈಮಾಸಿಕ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗದ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೇ.03ರಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರವರು ಸಿಂಧನೂರು ಆಗಮನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಮೇ.03ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಅವರು ಅಂದು ಬೆಳಿಗ್ಗೆ 11.30ಕ್ಕೆ ಹೊಸಪೇಟೆ ತಾಲೂಕಿನ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹೆಲಿಪ್ಯಾಡ್ ಆವರಣದಿಂದ ನಿರ್ಗಮಿಸಿ, ಮಧ್ಯಾಹ್ನ 12ಗಂಟೆಗೆ ರಾಯಚೂರು ಜಿಲ್ಲೆಯ ಸಿಂಧನೂರಿನ ತಾಲೂಕು ಕ್ರೀಡಾಂಗಣಕ್ಕೆ ಆಗಮಿಸಿ,**



ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ ಇವರ ಶ್ರೀ.ಬಸನಗೌಡ ಫೌಂಡೇಷನ್ ಸಿಂಧನೂರು ವತಿಯಿಂದ ಹಮ್ಮಿಕೊಂಡಿರುವ ಉಚಿತ ಸಾಮೂಹಿಕ ವಿವಾಹ ಹಾಗೂ ಇತರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3ಗಂಟೆಗೆ ಸಿಂಧನೂರು ತಾಲೂಕು ಕ್ರೀಡಾಂಗಣದಿಂದ ಹೆಲಿಕ್ಯಾಪ್ಟರ್ ಮೂಲಕ ನಿರ್ಗಮಿಸಿ ಕೇಂದ್ರ ಸ್ಥಾನ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಉಪಮುಖ್ಯಮಂತ್ರಿಗಳ ಹೆಚ್ಚುವರಿ ಕಾರ್ಯದರ್ಶಿ ಬಿ.ಎಸ್. ಶ್ರೀಧರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೇಮರೆಡ್ಡಿ ಮಲ್ಲಮ್ಮ ಜಯಂತಿ ಪೂರ್ವಭಾವಿ ಸಭೆ

## ಅರ್ಥಪೂರ್ಣ ಆಚರಣೆ ಅಗತ್ಯ ಸಿದ್ಧತೆ ಮಾಡಿಕೊಳ್ಳಿ: ಎಡಿಸಿ ಶಿವಾನಂದ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಹೇಮರೆಡ್ಡಿ ಮಲ್ಲಮ್ಮ ಜಯಂತಿ ಅದ್ದೂರಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಏಪ್ರಿಲ್ 30ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಶ್ರೀ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.**



ಹೇಮರೆಡ್ಡಿ ಮಲ್ಲಮ್ಮ ಜಯಂತಿ ಮೇ.10ರಂದು ಆಚರಣೆ ಮಾಡಲಾಗುವುದು. ಜಯಂತಿ ದಿನದಂದು ಜಿಲ್ಲೆಯ ಎಲ್ಲ ಸರ್ಕಾರಿ ಕಚೇರಿ, ತಾಲೂಕು ಕೇಂದ್ರಗಳಲ್ಲಿ ಮತ್ತು ತಾಲೂಕು ಕಚೇರಿ, ಗ್ರಾಮ ಪಂಚಾಯತ್, ಶಾಲಾ, ಕಾಲೇಜು ಹಾಗೂ ವಸತಿ ನಿಲಯಗಳಲ್ಲಿ ಶ್ರೀ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಡ್ಡಾಯವಾಗಿ ಆಚರಣೆ ಮಾಡಬೇಕಾಗಿದ್ದು, ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು. ಜಿಲ್ಲಾ ಕೇಂದ್ರದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆಗಾಗಿ ಸಂಬಂಧಿಸಿದ ಇಲಾಖೆ ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಬೇಕು.

ಮೇ 10ರ ಬೆಳಗ್ಗೆ 10 ಗಂಟೆಗೆ ನಗರದ ಪಂಡಿತ ಸಿದ್ಧರಾಮ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಎಲ್ಲ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಜಯಂತಿ ಆಚರಣೆಗೆ ಅಚ್ಚುಕಟ್ಟು ವ್ಯವಸ್ಥೆ ಕಲ್ಪಿಸಬೇಕು. ಜಯಂತಿ ಆಚರಣೆ ಕಾರ್ಯಕ್ರಮಕ್ಕೆ ಸಮಾಜದ ಬಂಧುಗಳ ಸಹಕಾರವೂ ಅಗತ್ಯವಿದ್ದು, ಜಿಲ್ಲಾಡಳಿತದೊಂದಿಗೆ ಸಹಕರಿಸಿ ವ್ಯವಸ್ಥಿತ ಜಯಂತಿ ಆಚರಣೆಗೆ ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದರು. ಸರ್ಕಾರದ ಮಾರ್ಗಸೂಚಿಯನ್ವಯ ಜಯಂತಿ ಆಚರಣೆ ನಡೆಯಬೇಕು.

ಶಿಷ್ಟಾಚಾರ ಅನುಸಾರ ಆಮಂತ್ರಣ ಪತ್ರಿಕೆ ಮುದ್ರಿಸಿ ವಿತರಿಸಬೇಕು. ಜಯಂತಿಗೆ ಆಗಮಿಸುವ ಜನತೆಗೆ ಕುಡಿಯುವ ನೀರು, ಉಪಹಾರ, ಆಸನದ ವ್ಯವಸ್ಥೆ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ರೆಡ್ಡಿ ಸಮಾಜದ ಜಿಲ್ಲಾಧ್ಯಕ್ಷರಾದ ಡಾ.ಬಸನಗೌಡ, ತಾಲೂಕು ಅಧ್ಯಕ್ಷರಾದ ರಾಮನಗೌಡ ಏಗನೂರು, ಚಂದ್ರಶೇಖರ ಮಿರ್ಜಾಪುರ, ವಸಂತ ರೆಡ್ಡಿ, ನವೀನ್ ಕುಮಾರ್, ವಿರುಪಣ್ಣ ಚೌಧರಿ, ಜಿ.ಎಸ್.ರಾಮನಗೌಡ, ಸುರೇಶ, ಪರಮೇಶ್ವರ ಸೇರಿದಂತೆ ಇತರರು ಇದ್ದರು.

# ಸರಕಾರಿ ಆಸ್ಪತ್ರೆಯಲ್ಲಿ ಪತ್ನಿಗೆ ಹೆರಿಗೆ ಮಾಡಿಸಿ, ಸರಳತೆ ಮೆರದ ಜಿ.ಪಂ ಸಿಇಒ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸರಕಾರಿ ಆಸ್ಪತ್ರೆಯಲ್ಲಿ ಆರ್ಥಿಕವಾಗಿ ದುರ್ಬಲರು ಮಾತ್ರ ಸೇವೆ ಪಡೆಯುತ್ತಾರೆ ಎಂದು ಅಸಡ್ಡೆ ತೋರುವವರಿಗೆ ರಾಯಚೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ತಮ್ಮ ಪತ್ನಿಯ ಹೆ-ರಿಗೆಯನ್ನು ಏಪ್ರಿಲ್ 26ರ ಭಾನುವಾರ ದಂದು ರಾಯಚೂರು ನಗರದ ರಿಮ್ಸ್ ಆಸ್ಪತ್ರೆಯಲ್ಲಿ ಮಾಡಿಸಿ, ಸರಳತೆ ಮೆರಯುವ ಮೂಲಕ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವಂತೆ ಸಂದೇಶ ರವಾನಿಸಿದ್ದಾರೆ.**



ನಗರದಲ್ಲಿ ಹಲವಾರು ಖಾಸಗಿ ಅಸ್ಪತ್ರೆಗಳಿದ್ದರೂ ಸಹ ಮನಸ್ಸು ಮಾಡದೆ ಸರಕಾರದ ಆಸ್ಪತ್ರೆಗಳಲ್ಲಿ ಸುಸಜ್ಜಿತ ಹೆರಿಗೆ ಕೊಠಡಿ, ವಾರ್ಡ್, ನುರಿತ ತಜ್ಞ ವೈದ್ಯರ ಸೇವೆ, ನಿಯಮಿತವಾಗಿ ನಿಗಾ ವಹಿಸುವ ಸಿಬ್ಬಂದಿಗಳ ಸೇವೆಯನ್ನು ಪ್ರತಿಯೊಬ್ಬರೂ ಪಡೆಯಲಿ ಎಂಬ ಸದುದ್ದೇಶದಿಂದ ತಮ್ಮ ಪತ್ನಿಯ ಹೆರಿಗೆಯನ್ನು ರಿಮ್ಸ್ ಆಸ್ಪತ್ರೆಯಲ್ಲಿ ಮಾಡಿಸಿದ್ದು, ಅವರ ಪತ್ನಿ ಗಂಡು ಮಗುವಿಗೆ ಜನ್ಮ ನೀಡಿದ್ದಾರೆ. ಪ್ರಸ್ತುತ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಆಧೀನದ ನಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಆರೈಕೆಯಲ್ಲಿದ್ದು, ತಾಯಿ ಮಗು ಅರೋಗ್ಯವಾಗಿದ್ದಾರೆ.

ಸರಕಾರದ ಸೌಲಭ್ಯ ಪ್ರತಿಯೊಬ್ಬರು ಪಡೆಯಿರಿ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ ಕಾಂದೂ ಅವರು ಮಾತನಾಡಿ, ಸರಕಾರವು ಗ್ರಾಮೀಣ ಪ್ರದೇಶ ಸೇ-ರಿದಂತೆ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ತಾಯಿ ಮಗುವಿನ ಆರೈಕೆಗಾಗಿ ನುರಿತ ಹೆರಿಗೆ ತಜ್ಞರು, ಸುಸಜ್ಜಿತ ಹೆರಿಗೆ ಕೊಠಡಿ, ಆದ-ುನಿಕ ಪರಿಕರಗಳು, ಸೂಕ್ತ ಪ್ರಯೋಗಾಲಯ ಪರೀಕ್ಷೆಗಳು, ಸಕಾಲದಲ್ಲಿ ಔಷಧೋಪಚಾರ,

ಪೌಷ್ಟಿಕ ಆಹಾರ ಒದಗಿಸುವುದನ್ನು ಖುದ್ದು ಪರಿಶೀಲನೆಯಲ್ಲಿ ಕಂಡು ಬರುತ್ತಿರುವುದರಿಂದ ಸರಕಾರದ ಸೌಲಭ್ಯಗಳು ಜನ ಸಾಮಾನ್ಯರು ಪಡೆಯಬೇಕು. ತಾಯಿ ಮಕ್ಕಳ ಆಸ್ಪತ್ರೆ ಅಥವಾ ರಿಮ್ಸ್ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸುವ ನಿರ್ಧಾರ ಕೈಗೊಂಡಿದ್ದು, ರಿಮ್ಸ್‌ನಲ್ಲಿ ಹೆರಿಗೆಯಾಗಿದ್ದು ಪ್ರಸ್ತುತ ಮುಂದಿನ ಆರೈಕೆಗೆ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಆರೈಕೆ ಪಡೆಯುತ್ತಿದ್ದಾರೆ. ಇದು ವೈಯಕ್ತಿಕವಾಗಿ ನಮಗೆ ಹೆಮ್ಮೆಯ ವಿಷಯವಾಗಿದೆ ಎಂದರು.

## ಕೆ.ಪಿ.ಎಸ್.ಸಿ ಗೆಜೆಟೆಡ್ ಪ್ರೋಬೇಷನರಿ ವ್ಯಕ್ತಿತ್ವ ಪರೀಕ್ಷೆಗೆ ಅರ್ಹತೆ ಪಡೆದ ಅಭ್ಯರ್ಥಿಗಳಿಗಾಗಿ ಅಣುಕು ವ್ಯಕ್ತಿತ್ವ ಪರೀಕ್ಷೆ ಆಯೋಜನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಲೋಕಸೇವಾ ಆಯೋಗ (ಕೆ.ಪಿ. ಎಸ್.ಸಿ) ವತಿಯಿಂದ 2023-24ನೇ ಸಾಲಿನ ಗೆಜೆಟೆಡ್ ಪ್ರೋಬೇಷನರಿ ಗ್ರೂಪ್-ಎ ಹಾಗೂ ಬಿ ವೃಂದದ ಒಟ್ಟು 384 ಹುದ್ದೆಗಳ (310-ಆರ್‌ಪಿಸಿ+ 74-ಹೆಚ್‌ಕೆ) ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, ಮುಖ್ಯ ಪರೀಕ್ಷೆಯಲ್ಲಿ ತೇರ್ಗಡೆಗೊಂಡು 1:3ರ ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ ಅರ್ಹತೆ ಪಡೆದ ಅಭ್ಯರ್ಥಿಗಳಿಗಾಗಿ ಸಂದರ್ಶನ ಪೂರ್ವ ಸಿದ್ಧತೆ ಹಾಗೂ ಆತ್ಮವಿಶ್ವಾಸ ವೃದ್ಧಿ ಉದ್ದೇಶದಿಂದ ರಾಯಚೂರು ಜಿಲ್ಲಾಡಳಿತ ವತಿಯಿಂದ ಅಣುಕು ವ್ಯಕ್ತಿತ್ವ ಪರೀಕ್ಷೆ (Mock Personality Test) ಆಯೋಜಿಸಲಾಗುತ್ತಿದೆ.**



ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ವಿಷಯ ಜ್ಞಾನದ ಜೊತೆಗೆ ವ್ಯಕ್ತಿತ್ವ, ಸಂವಹನ ಕೌಶಲ್ಯ, ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ಆಡಳಿತಾತ್ಮಕ ಮನೋಭಾವ ಹಾಗೂ ಸಮಕಾಲೀನ ವಿಷಯಗಳ ಅರಿವು ಅತ್ಯಂತ ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳಿಗೆ ನೈಜ ಸಂದರ್ಶನದ ಅನುಭವ ಕಲ್ಪಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ರೂಪಿಸಲಾಗಿದೆ. ಅಣುಕು ವ್ಯಕ್ತಿತ್ವ ಪರೀಕ್ಷೆಯಲ್ಲಿ ಅನುಭವಿ ಜಿಲ್ಲಾಮಟ್ಟದ ಅಧಿಕಾರಿಗಳು, ವಿಷಯ ತಜ್ಞರು, ಹಿರಿಯ ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶಕರು ಹಾಗೂ ಸಂದರ್ಶನ ಪ್ಯಾನೆಲ್ ಸದಸ್ಯರು ಭಾಗವಹಿಸಿ, ಅಭ್ಯರ್ಥಿಗಳ ಸಂದರ್ಶನ ನಡೆಸುವ ಮೂಲಕ ವೈಯಕ್ತಿಕ ಪ್ರತಿಕ್ರಿಯೆ, ಸಂದರ್ಶನ ತಂತ್ರಗಳು, ಸಾಮಾನ್ಯ ತಪ್ಪುಗಳು ಹಾಗೂ ವ್ಯಕ್ತಿತ್ವ ಅಭಿವೃದ್ಧಿಗೆ ಸಂಬಂಧಿಸಿದ ಉಪಯುಕ್ತ ಸಲಹೆಗಳನ್ನು ನೀಡಲಿದ್ದಾರೆ.

ಭಾಗವಹಿಸಲು ಇಚ್ಛಿಸುವ ಅರ್ಹ ಅಭ್ಯರ್ಥಿಗಳು ತಮ್ಮ ಹೆಸರು, ಪರೀಕ್ಷಾ ನೋಂದಣಿ ಸಂಖ್ಯೆ, ಸಂಪರ್ಕ ಸಂಖ್ಯೆ ಹಾಗೂ ಮುಖ್ಯ ಪರೀಕ್ಷೆಯ ವಿವರಗಳನ್ನು ಜಿಲ್ಲಾಡಳಿತದ ಸೂಚನೆಯಂತೆ ಮುಂಚಿತವಾಗಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಕ್ರಮ ಆಯೋಜನಾ ಅಧಿಕಾ-ರಿಗಳಾದ ಮಹಮ್ಮದ್ ಯೂಸೂಫ್, ಯೋಜನಾ ನಿರ್ದೇಶಕ?ರು ಸಿಯೋಲ್ ಇವರ ಮೊಬೈಲ್ ಸಂಖ್ಯೆ: 9964012161ಗೆ ಸಂಪರ್ಕ ಮಾಡಬಹುದಾಗಿದೆ. ಕಾರ್ಯಕ್ರಮದ ದಿನಾಂಕ ಹಾಗೂ ಸ್ಥಳವನ್ನು ಶೀಘ್ರದಲ್ಲೇ ಪ್ರತ್ಯೇಕವಾಗಿ ಪ್ರಕಟಿಸಲಾಗುವುದು. ಜಿಲ್ಲೆಯ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳು ಈ ಅಪರೂಪದ ಅವಕಾಶವನ್ನು ಸದುಪಯೋಗಪಡಿಸಿಕೊಂಡು ವ್ಯಕ್ತಿತ್ವ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡುವಂತೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಾನಪದ ಕಲಾವಿದರನ್ನು ಉಳಿಸಿ, ಬೆಳೆಸಬೇಕು: ವರರುದ್ರಮುನಿ ಶಿವಾಚಾರ್ಯರು



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಇಂದಿನ ಆಧುನಿಕತೆಯಲ್ಲಿ ನಿಶುಸುತ್ತಿರುವ ಜಾನಪದ ಕಲೆಗಳನ್ನು, ಕಲಾವಿದರನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಗ್ರಾಮೀಣ ಪ್ರದೇಶದ ಜನತೆಯ ಮೇಲಿದೆ, ಯುವಕರು ತಮ್ಮ ಹಿರಿಯರಿಂದ ಇವುಗಳನ್ನು ಕಲಿತು ಭವಿಷ್ಯತ್ತಿನ ಜನತೆಗೆ ಉಳಿಸಬೇಕು ಎಂದು ಗಚ್ಚಿನ ಮಠದ ವರರುದ್ರಮುನಿ ಶಿವಾಚಾರ್ಯರು ಹೇಳಿದರು.**

ಪಟ್ಟಣದ ಗಚ್ಚಿನ ಮಠದ ಸಭಾ ಭವನದಲ್ಲಿ ಹಮ್ಮಿಕೊಂಡಿದ್ದ ತಾಲೂಕು ಮಟ್ಟದ ಜಾನಪದ ಕಲಾ ಸಂಭ್ರಮ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಾಮಾಜಿಕ ಜಾಲತಾಣಗಳ ಅಬ್ಬರದ ನಡುವೆಯೂ ಜಾನಪದ ಕಲೆ, ನಾಡಿನ ಸಂಸ್ಕೃತಿ ಉಳಿಸಲು ಕಲಾವಿದರು ಸಾಕಷ್ಟು ಶ್ರಮಪಡುತ್ತಿದ್ದಾರೆ ಎಂದರು.

ನಂತರ ಪುರಸಭೆ ಅಧ್ಯಕ್ಷ ಸುರೇಶ ಹರಸೂರು ಮಾತನಾಡಿ, ಯುವಕರು ಮೊಬೈಲ್ ಗೀಳು ಬಿಟ್ಟು ನಾಡಿನ ಕಲೆ, ಸಾಹಿತ್ಯ ಬಗ್ಗೆ ಅಭಿರುಚಿ ಬೆಳೆಸಿಕೊಳ್ಳಬೇಕು ಎಂದರು. ದಲಿತ ಸಾಹಿತಿ ದಾನಪ್ಪಸಿ.ನಿಲೂಗಲ್, ಉಪನ್ಯಾಸಕ ಮಹಾಂತೇಶ ಮಸ್ಕಿ, ಕಸಾಪ ಅಧ್ಯಕ್ಷೆ ವಿದ್ಯಾವತಿ ವನಕಿ ಮಾತನಾಡಿದರು. ಈ ಸಂದರ್ಭದಲ್ಲಿ ಜಂಬಣ್ಣ ಹಸ್ಮಕಲ್, ಯಲ್ಲಪ್ಪ, ರಂಗಪ್ಪ ಮಾಸ್ತರ್, ರಂಗ ನಿರ್ದೇಶಕ ರಂಜಾನಸಾಬ್ ಉಳ್ಳಾಗಡ್ಡಿ, ಅಮರೇಶ ಹಸ್ಮಕಲ್ ಸೇರಿದಂತೆ ಗಣ್ಯರು ಮತ್ತು ಜನಪದ ಕಲಾವಿದರು ಸೇರಿದಂತೆ ಇನ್ನಿತರರಿದ್ದರು.

## ಗ್ರಾಮೀಣ ಪ್ರತಿಭೆಗೆ ಬಲ: ಬಿಎಎಸ್ ಶಾಲೆಗೆ ಸಿಬಿಎಸ್‌ಸಿ ಮಾನ್ಯತೆ ಮೇ 3ರಂದು ಬೃಹತ್ ಉದ್ಯೋಗ ಮೇಳ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ತಾಲೂಕಿನ ಹಡಲಗೇರಿ ವ್ಯಾಪ್ತಿಯ ಬಿಎಎಸ್ ಇಂಟರ್‌ನ್ಯಾಷನಲ್ ಸ್ಕೂಲ್‌ಗೆ ಸಿಬಿಎಸ್‌ಸಿ ಮಾನ್ಯತೆ ದೊರೆತಿರುವುದು ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೊಸ ಅವಕಾಶಗಳನ್ನು ತೆರೆದಿದೆ ಎಂದು ಸಂಸ್ಥೆಯ ಆಡಳಿತಾಧಿಕಾರಿ ಪ್ರಭುಗೌಡ ಬಿರಾದಾರ ತಿಳಿಸಿದ್ದಾರೆ.**



ಗುರುವಾರ ಶಾಲೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದ್ದು, ಸಿಬಿಎಸ್‌ಸಿ ಮಾನ್ಯತೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಮತ್ತಷ್ಟು ಬಲಪಡಲಿದೆ ಎಂದರು. ಈಗಾಗಲೇ ಸಂಸ್ಥೆ ಗ್ರಾಮೀಣ ಪ್ರತಿಭಾವಂತರಿಗೆ ಉತ್ತಮ ಶಿಕ್ಷಣ ನೀಡುವಲ್ಲಿ ಸಾಧನೆ ಮಾಡಿದ್ದು, ಈ ಮಾನ್ಯತೆ ಇನ್ನಷ್ಟು ಉತ್ತೇಜನ ನೀಡಲಿದೆ ಎಂದು ಹೇಳಿದರು. ಶೈಕ್ಷಣಿಕ ಸಂಯೋಜಕ ಸತೀಶ ವಾಲಿಕಾರ ಮಾತನಾಡಿ, ಅತಿ ಕಡಿಮೆ ಅವಧಿಯಲ್ಲಿ ಸಿಬಿಎಸ್‌ಸಿ ಮಾನ್ಯತೆ ದೊರೆತಿರುವುದು ಹೆಮ್ಮೆಯ ಸಂಗತಿ.

ಇದರ ಫಲವಾಗಿ ಈ ಭಾಗದ ವಿದ್ಯಾರ್ಥಿಗಳು ಉತ್ತಮ ಶೈಕ್ಷಣಿಕ ಬೆಳವಣಿಗೆ ಸಾಧಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಇದೇ ವೇಳೆ, ಸಂಸ್ಥೆಯ ವತಿಯಿಂದ ಮೇ 3ರಂದು ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ಸುಮಾರು 2,500 ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಗುರಿ ಹೊಂದಲಾಗಿದೆ. ಎಸ್-ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೋಮಾ ಅಥ-'ವಾ ಯಾವುದೇ ಪದವಿ ಪಡೆದವರು ಹಾಗೂ ವಿದ್ಯಾಭ್ಯಾಸ ಮಧ್ಯೆ ನಿಲ್ಲಿಸಿದವರಿಗೂ ಮೇಳದಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿದೆ.

ಸಂಸ್ಥೆ ಹಲವು ಎಂಎನ್‌ಸಿ ಮತ್ತು ಖಾಸಗಿ ಕಂಪನಿಗಳೊಂದಿಗೆ ಸಹಭಾಗಿ-ತ್ವ ಹೊಂದಿದ್ದು, ಬೆಂಗಳೂರು, ಕೋಲಾರ, ದೊಡ್ಡಬಳ್ಳಾಪುರ, ಮೈಸೂರು ಸೇ-ರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲು ಮುಂದಾಗಿದೆ. ಮೇಳದಲ್ಲಿ ಅಭ್ಯರ್ಥಿಗಳಿಗೆ ಕಂಪನಿಗಳಿಂದ ನೇರ ಸಂದರ್ಶನ ನಡೆಸಿ, ಸ್ಥಳದಲ್ಲೇ ನೇಮಕಾತಿ ಪತ್ರ ನೀಡಲಾಗುತ್ತದೆ. ಆಯ್ಕೆಯಾದವರು ಕಂಪನಿಗಳ ನಿಯಮಾನುಸಾರ ಕೆಲಸಕ್ಕೆ ಸೇರಿಕೊಳ್ಳಬಹುದು. ಮೇಳದಲ್ಲಿ ಭಾಗವಹಿಸುವವರಿಗೆ ಉಚಿತ ಊಟ ಹಾಗೂ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಆಸಕ್ತರು ತಮ್ಮ ಮೂಲ ದಾಖಲೆಗಳೊಂದಿಗೆ ಮೇ 3ರಂದು ಬೆಳಿಗ್ಗೆ 9 ಗಂಟೆಗೆ ಹಾಜರಾಗುವಂತೆ ಮನವಿ ಮಾಡಲಾಗಿದೆ.

ಹೆಚ್ಚಿನ ಮಾಹಿತಿಗಾಗಿ 9108445003, 9187229281, 9108445005, 9353158101 ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದು. "ಕೇಂದ್ರದಿಂದ ಸಿಬಿಎಸ್‌ಸಿ ಮಾನ್ಯತೆ ದೊರೆತಿರುವುದು ಸಂಸ್ಥೆಯ ಸೌಲಭ್ಯಗಳು ಹಾಗೂ ಪಾಲಕರ ಸಹಕಾರದ ಫಲವಾಗಿದೆ. ಇದ-ರಿಂದ ತಾಲೂಕಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ," ಎಂದು ಸಂಸ್ಥೆಯ ಕಾರ್ಯದರ್ಶಿ ಸುಮಂಗಳಾ ಬಿರಾದಾರ ತಿಳಿಸಿದ್ದಾರೆ.

## ನೇಮಕಾತಿ ಪ್ರಕಟಣೆ

SECL ನೇಮಕಾತಿ 2026-43 ಜೂನಿಯರ್ ಟೆಕ್ನಿಕಲ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 30, 2026 SECL ನೇಮಕಾತಿ 2026: 43 ಜೂನಿಯರ್ ಟೆಕ್ನಿಕಲ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಸೌತ್ ಈಸ್ಟರ್ನ್ ಕೋಲ್‌ಫೀಲ್ಡ್ಸ್ ಲಿಮಿಟೆಡ್ ಏಪ್ರಿಲ್ 2026 ರ SECL ಅಧಿಕೃತ ಅಧಿಸೂಚನೆಯ ಮೂಲಕ ಜೂನಿಯರ್ ಟೆಕ್ನಿಕಲ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬಿಲಾಸ್ಪುರ್ – ಛತ್ತೀಸ್‌ಗಢ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 20-ಮೇ-2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 30-04-2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20-ಮೇ-2026 ಅರ್ಜಿಗಳನ್ನು ರವಾನಿಸಲು ಘಟಕ (HR) ಅಧಿಕಾರಿಗೆ ಕೊನೆಯ ದಿನಾಂಕ: 26 ಮೇ 2026 (ಘಟಕ (HR) ಅಧಿಕಾರಿ ತಿರಸ್ಕರಿಸಿದ ನಂತರ ಪ್ರಾತಿನಿಧ್ಯ ಸಲ್ಲಿಸುವ) ಅರ್ಜಿದಾರರಿಗೆ ಆರಂಭಿಕ ದಿನಾಂಕ: 27 ಮೇ 2026 (ಘಟಕ (HR) ಅಧಿಕಾರಿ ತಿರಸ್ಕರಿಸಿದ ನಂತರ ಪ್ರಾತಿನಿಧ್ಯ ಸಲ್ಲಿಸುವ) ಅರ್ಜಿದಾರರಿಗೆ ಕೊನೆಯ ದಿನಾಂಕ: 2 ಜೂನ್ 2026 (ಘಟಕ (HR) ಅಧಿಕಾರಿ / SO(HR) ಅರ್ಜಿದಾರರ ಪಟ್ಟಿಯನ್ನು ಅಂತಿಮಗೊಳಿಸಲು ಅಂತಿಮ ದಿನಾಂಕ: 08 ಜೂನ್ 2026 ಅರ್ಜಿಯನ್ನು ರವಾನಿಸಲು ವಾರ್ಷಿಕ ಮಹಾಸಭೆಯ ಅಂತಿಮ ದಿನಾಂಕ: 11 ಜೂನ್ 2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ: ಇಲ್ಲಿ ಕ್ಲಿಕ್ ಮಾಡಿ

# ದಲಿತರ ರಾಜಕೀಯ ಪ್ರವೇಶಕ್ಕೆ ಕೃಷ್ಣಪ್ಪ ಮಹತ್ವದ ಪಾತ್ರ: ಶ್ಯಾಮಸುಂದರ ಕುಂಬಾದಾಳ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ಕಾನ್ಸಿರಾಮರು 1972ರಲ್ಲಿ ಬಾಮ್ ಸೇಫ್ ಸಂಘಟನೆಯನ್ನು ದೇಶದಲ್ಲಿ ಆರಂಭಿಸಿದಾಗ, ಪ್ರೊ. ಬಿ. ಕೃಷ್ಣಪ್ಪ ಕರ್ನಾಟಕದಲ್ಲಿ ಇದೇ ರೀತಿಯ ದಲಿತರ ಚಳುವಳಿಯನ್ನು ಸ್ಥಾಪಿಸಿದರು. ನಂತರ ದೇಶದಲ್ಲಿ ಬಾಮ್ ಸೇಫ್ ಸಂಘಟನೆ ಬಹುಜನ ಸಮಾಜ ಪಕ್ಷವಾಗಿ ರೂಪುಗೊಂಡಾಗ, ಕಾನ್ಸಿರಾಮರಿಂದ ಪ್ರೇರಿತಗೊಂಡ ಪ್ರೊ. ಬಿ. ಕೃಷ್ಣಪ್ಪ ತಮ್ಮ ದಸಂಸ ಸಂಘಟನೆಯನ್ನು ಬಹುಜನ ಸಮಾಜ ಪಕ್ಷಕ್ಕೆ ಬೆಂಬಲ ನೀಡಿ, ದಲಿತರ ರಾಜಕೀಯ ಪ್ರವೇಶಕ್ಕೆ ದಾರಿ ಮಾಡಿಕೊಟ್ಟಿದ್ದಾರೆ.**

ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಕಾರ್ಯದರ್ಶಿ ಶ್ಯಾಮಸುಂದರ ಕುಂಬಾದಾಳ ಹೇಳಿದರು. ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ



ಪ್ರೊ. ಬಿ. ಕೃಷ್ಣಪ್ಪ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ರಾಜ್ಯದಲ್ಲಿ ದಲಿತರ ರಾಜಕೀಯ ನೆಲೆ ನಿರ್ಮಾಣಕ್ಕೆ ಪ್ರೊ. ಬಿ. ಕೃಷ್ಣಪ್ಪ ಪ್ರಮುಖ ಪಾತ್ರ ವಹಿಸಿದ್ದು, ಅವರ ನಾಯಕತ್ವದಿಂದಲೇ ಇಂದು ದಲಿತರಿಗೆ ರಾಜಕೀಯ ಸ್ಥಾನಮಾನಗಳು ದೊರಕುತ್ತಿವೆ. ಅವರ ಚಿಂತನೆಗಳನ್ನು ಮುಂದುವರಿಸುತ್ತಿರುವ ಸಾಹಿತಿಗಳು, ಚಿಂತಕರು ಹಾಗೂ ದಲಿತ ನಾಯಕರು ಚಳುವಳಿಯನ್ನು ಬಲಪಡಿಸುತ್ತಿದ್ದಾರೆ.

ಇಂತಹ ಮಹಾನ್ ನಾಯಕನ ಪ್ರತಿಮೆಯನ್ನು ವಿಧಾನಸೌಧ ಮುಂಭಾಗದಲ್ಲಿ ಸ್ಥಾಪಿಸಿ, ದಲಿತರ ರಾಜಕೀಯ ಭವಿಷ್ಯಕ್ಕೆ ಸರ್ಕಾರ ಆದ್ಯತೆ ನೀಡಬೇಕಾಗಿತ್ತು. ಜೊತೆಗೆ ಜೂನ್ 9ರಂದು ಅವರ ಜಯಂತಿಯನ್ನು ಸರ್ಕಾರದಿಂದ ಆಚರಿಸಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಶ್ಯಾಮಸುಂದರ ಕುಮದಾಳ ರಾಜ್ಯ ಕಾರ್ಯದರ್ಶಿ, ಚಂದ್ರಶೇಖರ ವಿಧಾನಸಭಾ ಉಸ್ತುವಾರಿ ಮಾನ್ವಿ, ಶಿವಲಿಂಗಯ್ಯ ಸ್ವಾಮಿ ಸಂಯೋಜಕ, ಚಂದ್ರಶೇಖರಯ್ಯ ಸ್ವಾಮಿ ನಗರ ಘಟಕ ಅಧ್ಯಕ್ಷ, ರವೀಂದ್ರ ಜಾನಕಲ್ ದಸಂಸ ಮುಖಂಡ, ಮಲ್ಲಿಕಾರ್ಜುನ ಜಾನಕಲ್ ಮಾಜಿ ಪುರಸಭೆ ಸದಸ್ಯ, ಶರಣಯ್ಯ ಸ್ವಾಮಿ, ಖಾಸಿಂ, ಬಾಬಾ, ಚನ್ನಬಸವ ಹಡಪದ, ತಾಯಪ್ಪ ದೊಡ್ಡಿ, ಮಹಮ್ಮದ್ ಸೇರಿದಂತೆ ಇತರರು ಉಪಸ್ಥಿತರಿದ್ದರು

# ಅರಣ್ಯ, ಹೌಸಿಂಗ್ ಬೋರ್ಡ್, ವಕ್ಫ್ ಜಾಗ ಕಬಳಿಕೆ ಆರೋಪ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ರಾಯಚೂರು ಜಿಲ್ಲೆಯಲ್ಲಿ ಅರಣ್ಯ, ಹೌಸಿಂಗ್ ಬೋರ್ಡ್ ಹಾಗೂ ವಕ್ಫ್ ಜಾಗಗಳ ಅಕ್ರಮ ಒತ್ತುವರಿ ಆರೋಪ ಸಂಬಂಧ ದಲಿತ ಸೇನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ಜಾವೀದ್ ಖಾನ್ ಮಾತನಾಡಿ, ಸಾರ್ವಜನಿಕ ಆಸ್ತಿ ಹಾಗೂ ಅರಣ್ಯ ಸಂಪತ್ತನ್ನು ಕಬಳಿಸಿರುವ ಗಂಭೀರ ಆರೋಪಗಳು ಕೇಳಿಬಂದಿದ್ದು, ಈ ಕುರಿತು ರಾಜ್ಯಪಾಲರು, ಮುಖ್ಯಮಂತ್ರಿ, ಅರಣ್ಯ ಸಚಿವರು ಹಾಗೂ ಲೋಕಾಯುಕ್ತ-ರಿಗೆ ದೂರು ಸಲ್ಲಿಸಲಾಗಿದೆ ಎಂದು ತಿಳಿಸಿದರು.**



ಈ ಸಂಬಂಧ ಅವರು ವಿವರಿಸಿ, ರಾಯಚೂರು ವಲಯದ ಸರ್ವೇ ಸಂಖ್ಯೆ 1252, 1253 ಮತ್ತು 1254ರಲ್ಲಿ ಸೇರಿರುವ ಸುಮಾರು 5 ಎಕರೆ ಮೀಸಲು ಅರಣ್ಯ ಭೂಮಿ ಸರ್ಕಾರದ ದಾಖಲೆಗಳಲ್ಲಿ ಅರಣ್ಯ ಜಾಗವಾಗಿದ್ದರೂ, ಆ ಭೂಮಿ ಕಬಳಿಕೆಯಾಗಿದೆ ಎಂಬ ಆರೋಪಗಳಿವೆ. ಜೊತೆಗೆ ಮಾನ್ವಿ ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿಯ ಸರ್ಕಾರಿ ಜಾಗ ಹಾಗೂ ಪಟ್ಟಣದ ವರವಲಯದಲ್ಲಿರುವ ವಕ್ಫ್ ಜಾಗಗಳು ಸಹ ಬೇನಾಮಿಗಳ ಹೆಸರಲ್ಲಿ ದಾಖಲಾಗಿರುವುದಾಗಿ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಕುರಿತು ನಡೆದ ಹಿಂದಿನ ಹೋರಾಟಗಳ ಹಿನ್ನೆಲೆ ಜಿಲ್ಲಾಡಳಿತ ಹಾಗೂ ನ್ಯಾಯಾಲಯವು ಸಂಬಂಧಿತ ಜಾಗವನ್ನು ಸರ್ಕಾರದ ವಶಕ್ಕೆ ಹಿಂತಿರುಗಿಸುವಂತೆ ಆದೇಶ ನೀಡಿದ್ದರೂ, ಅದರ ಅನುಷ್ಠಾನ ಸಮರ್ಪಕವಾಗಿ ನಡೆದಿಲ್ಲ ಎಂಬುದು ಗಮನಾರ್ಹವಾಗಿದೆ. ಈ ಪ್ರಕರಣದಲ್ಲಿ ಸಂಬಂಧಪಟ್ಟವರ ಮೇಲೆ ನಿಷ್ಪಕ್ಷಪಾತ ತನಿಖೆ ನಡೆಸಿ, ಸರ್ಕಾರಿ/ಅರಣ್ಯ/ವಕ್ಫ್ ಜಾಗಗಳ ಹಕ್ಕುಸ್ವಾಮ್ಯ ಬದಲಾವಣೆ ಕಾನೂನುಬದ್ಧವಾಗಿದೆಯೇ ಎಂಬುದನ್ನು ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅವರು ಒತ್ತಾಯಿಸಿದರು.

# ಬಂಧುಶತಪುರೇಶನಿಗೆ ಬೆಳ್ಳಿ ತೊಟ್ಟಿಲು ಸಮರ್ಪಿಸಿದ ವಸಂತರಾವ್ ಕುಲಕರ್ಣಿ



**ನೈಜ್ಯ ದೆಸೆ ನ್ಯೂಸ್**

**ಬಳಗಾನೂರು: ಪಕ್ಕದ ದಿದ್ದಿಗಿ ಗ್ರಾಮದ ಖ್ಯಾತ ಉದ್ಯಮಿ ವಸಂತರಾವ್ ಕುಲಕರ್ಣಿ ದಿದ್ದಿಗಿ ಸಾ ಬಳ್ಳಾರಿ ಯವರು ಗುರುವಾರ ಬಳಗಾನೂರಿನ ಆರಾಧ್ಯದೈವ ಮಾರುತೇಶ್ವರನಿಗೆ 3kg ಬೆಳ್ಳಿಯ ತೊಟ್ಟಿಲನ್ನು ಭಕ್ತಿಯ ಕಾಣಿಕೆಯಾಗಿ ನೀಡಿದ್ದಾರೆ. ಅವರಿಗೆ ತಹಸಿಲ್ದಾರ್ ಮಂಜುನಾಥ ಬೋಗಾವತಿ ಮತ್ತು ದೇವಸ್ಥಾನದ ಪ್ರಧಾನ ಅರ್ಚಕರಾದ ಗೋವಿಂದ, ರಂಗಣ್ಣಪೂಜಾರಿ,ಸೇರಿದಂತೆ ನಾಡತಹಸಿಲ್ದಾರ್ ನಾಗಲಿಂಗಪತ್ತಾರ್,ಗ್ರಾಮಲೆಕ್ಕಿಗ ಅಮರೇಶ ಗೌರವಸನ್ಮಾನ ಮಾಡಿದರು,**

ಅದರಂತೆ ಇನ್ನೋರ್ವ ಭಕ್ತ ಸಿದ್ದಯ್ಯಸ್ವಾಮಿ ಯವರು ಆಹುಜಾಕಂಪನಿಯ ಧ್ವನಿವರ್ಧಕವನ್ನು ಮಾರುತೇಶ್ವರನ ದೇವಸ್ಥಾನಕ್ಕೆ ದೇಣಿಗೆಯಾಗಿ ನೀಡಿದ್ದಾರೆ. ಅವರಿಗೂ ದೇವಸ್ಥಾನದ ವತಿಯಿಂದ ಅರ್ಚಕರು ಗೌರವಸನ್ಮಾನವನ್ನು ಮಾಡಿದರು. ನಂತರ ದೇವಸ್ಥಾನದ ಗೋಪುರಕ್ಕೆ ಕಳಸಾರೋಹಣಮಾಡಿದರು.ಸಂಜೆ ಉತ್ಸವ ನಡೆಯಿತು. ವರದಿ, ಸುರೇಶ ಬಳಗಾನೂರು.

# ಮದುವಣಗಿತ್ತಿಯಂತೆ ಮಿಂಚುತ್ತಿರುವ ಬಳಗಾನೂರು ಬಂಧುಶತಪುರೇಶನ ಜಾತ್ರೆಗೆ ಭರ್ಜರಿ ಸಿದ್ಧತೆ

**ನೈಜ್ಯ ದೆಸೆ ನ್ಯೂಸ್**

**ಬಳಗಾನೂರು: ಮೇ ಒಂದನೇ ತಾರೀಕಿನಂದು ನಡೆಯಲಿರುವ ಆರಾಧ್ಯ ದೈವ ಬಂಧುಶತಪುರೇಶ (ಮಾರುತೇಶ್ವರ) ಜಾತ್ರೆಯ ಅಂಗವಾಗಿ ಬಳಗಾನೂರು ಪಟ್ಟಣ ಮದುವಣಗಿತ್ತಿಯಂತೆ ಸಿಂಗರಿಸಿಕೊಂಡು ಕಂಗೊಳಿಸುತ್ತಿದೆ. ಜಾತ್ರೆಯ ಸಡಗರಕ್ಕೆ ಊರು ಒಗ್ಗಟ್ಟಿನ ರಂಗೋಲಿ ಹಚ್ಚಿದಂತೆ ಕಾಣುತ್ತಿದ್ದು, ಎಲ್ಲೆಡೆ ಹಬ್ಬದ ಸಂಭ್ರಮ ತೇಲುತ್ತಿದೆ.**

ಪಟ್ಟಣ ಪಂಚಾಯ್ತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮುಖ್ಯಾಧಿಕಾರಿ, ಸಮುದಾಯ ಸಂಚಾಲಕಿಯರು ಹಾಗೂ ಪೌರಕಾರ್ಮಿಕರು ಮತ್ತು ಸಿಬ್ಬಂದಿ ವರ್ಗ ಮುತುವರ್ಜಿಯಿಂದ ಸ್ವಚ್ಛತಾ ಕಾರ್ಯ ಕೈಗೊಂಡಿದ್ದಾರೆ. ಮುಖ್ಯರಸ್ತೆಗಳು, ಒಳರಸ್ತೆಗಳು,



ಸಾರ್ವಜನಿಕ ಸ್ಥಳಗಳು ಸೇರಿದಂತೆ ಎಲ್ಲೆಡೆ ಶುದ್ಧತೆ ಕಾಪಾಡುವಲ್ಲಿ ತೊಡಗಿಸಿಕೊಂಡಿದ್ದು, ಜಾತ್ರೆ ವ್ಯವಸ್ಥಿತವಾಗಿ ನಡೆಯಲು ಶ್ರಮ ಹರಿಸುತ್ತಿದ್ದಾರೆ. ಕಸ ವಿಲೇವಾರಿ, ರಸ್ತೆ ಸಮತಟ್ಟು, ನೀರಿನ ಹರಿವು ಸುಧಾರಣೆ ಮೊದಲಾದ ಮೂಲಭೂತ ವ್ಯವಸ್ಥೆಗಳನ್ನು ವೇಗವಾಗಿ ಪೂರ್ಣಗೊಳಿಸಲಾಗುತ್ತಿದ್ದು,

ಪಟ್ಟಣವು ಹೊಸ ಹೊಳಪಿನಲ್ಲಿ ಕಂಗೊಳಿಸುತ್ತಿದೆ. ಈ ಕಾರ್ಯಚಟುವಟಿ-ಕೆಗಳು ಕೇವಲ ಸಿದ್ಧತೆಯಲ್ಲ, ಹಬ್ಬದ ಆತ್ಮವೇ ರೂಪ ಪಡೆದುಕೊಂಡಂತೆ ಭಾಸವಾಗುತ್ತಿದೆ. ಇದರ ನಡುವೆ ಸಾರ್ವಜನಿಕರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಸ್ಥಳೀಯರು ಹಾಗೂ ಭಕ್ತರು ಪಟ್ಟಣ ಪಂಚಾಯ್ತಿಯ ಕಾರ್ಯವೈಖರಿಯನ್ನು ಶ್ಲಾಘಿಸಿ, "ಈ ರೀತಿಯ ಸಮರ್ಪಿತ ಸೇವೆಯಿಂದ ಜಾತ್ರೆ ಇನ್ನಷ್ಟು ಭವ್ಯವಾಗಿ ನೆರವೇರುತ್ತದೆ" ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಒಟ್ಟಾರೆ, ಬಳಗಾನೂರು ಇದೀಗ ಕೇವಲ ಪಟ್ಟಣವಲ್ಲ, ಹಬ್ಬದ ಹೃದಯದಂತೆ ಧಗಧಗಿಸುತ್ತಿದ್ದು, ಬಂಧುಶತಪುರೇಶನ ಜಾತ್ರೆಗೆ ಕ್ಷಣಗಣನೆ ಆರಂಭವಾಗಿದೆ. ವರದಿ: ಸುರೇಶ್ ಬಳಗಾನೂರು


# ಹಟ್ಟಿ ಚಿನ್ನದ ಗಣಿಗೆ ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಕಾಮ್ರೇಡ್ ಕೆ.ಎನ್. ಉಮೇಶ್ ಆಗಮನ




**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ವತಿಯಿಂದ ಮೇ 1ರಂದು ಆಯೋಜಿಸಲಾದ ಕಾರ್ಮಿಕ ದಿನಾಚರಣೆಯ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಹಟ್ಟಿ ಚಿನ್ನದ ಗಣಿಗೆ ಆಗಮಿಸಿದ ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಕೆ.ಎನ್. ಉಮೇಶ್ ಅವರನ್ನು ಹಟ್ಟಿಯ ಸಿಐಟಿಯು, ಎಸ್‌ಎಫ್‌ಐ ಹಾಗೂ ಕೆಪಿಆರ್‌ಎಸ್ ಮುಖಂಡರು ಸ್ವಾಗತ ಘೋಷಣೆಗಳ ನಡುವೆ ಅದ್ದೂರಿಯಾಗಿ ಬರಮಾಡಿಕೊಂಡರು.**

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ರಮೇಶ ವೀರಾಪೂರು, ಜಂಟಿ ಕಾರ್ಯದರ್ಶಿಗಳಾದ ಶರ್ಫುದ್ದೀನ್ ಹಾಗೂ ರಮೇಶ ವೀರಾಪೂರು, ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ಕಾರ್ಯದರ್ಶಿಗಳಾದ ವೆಂಕೋಬ್ ಮಿಯ್ಯಾಪೂರು, ರಮೇಶ ಬಾಬು, ಹನೀಫ್, ಗೌಸ್ ಮಿಯಾ, ಸಿದ್ದಪ್ಪ ಮುಂಡರಗಿ, ಕೆಪಿಆರ್‌ಎಸ್ ಮುಖಂಡರಾದ ಪೆಂಚಲಯ್ಯ, ಮಹಾಂತೇಶ್, ಸಿಐಟಿಯು ಹಟ್ಟಿ ಘಟಕದ ಫಕ್ರುದ್ದೀನ್, ಅಲ್ಲಾಭಕ್ಷ, ಶ್ರೀಧರ್, ಹಾಜಿಬಾಬು, ದಾವೂದ್, ಎಸ್-ಎಫ್‌ಐ ಮುಖಂಡ ರಮೇಶ್ ಜೆ., ಮೌನೇಶ ಕಡ್ಡೋಣ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.


ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.


# ಅಫಜಲಪುರ ತಾಲೂಕಿನ ಸಮಗ್ರ ನೀರಾವರಿಗೆ ಕರ್ನಾಟಕ ಪ್ರಾಂತ ರೈತ ಸಂಘ ಆಗ್ರಹ

**ನೈಜ್ಯ ದೆಸೆ ನ್ಯೂಸ್**

**ಅಫಜಲಪುರ: ಪಟ್ಟಣದ ಡಾ.ಬಾಬಾಸಾಹೇಬ್ ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಪದಾಧಿಕಾರಿಗಳು ಅಫಜಲಪುರ ತಾಲೂಕಿನ ಸಮಗ್ರ ನೀರಾವರಿಗಾಗಿ ಆಗ್ರಹಿಸಿದರು. ಸುದ್ದಿಗೊಷ್ಠಿಯನ್ನುದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಗುರು ಚಾಂದಕವಟೆ ತಾಲೂಕಿನ ಉದ್ದಗಲಕ್ಕೂ ಭೀಮಾನದಿ ಸೇರಿದಂತೆ ಅಮರ್ಜಾ, ಭೋರಿಹಳ್ಳ, ಸೇ-ರಿದಂತೆ ಹತ್ತು ಹಲವು ಹಳ್ಳಗಳು ಹರಿಯುತ್ತಿದ್ದರು ಅವಗಳನ್ನು ಸಂರಕ್ಷಣೆ ಮಾಡುವುದಕ್ಕಾಗದೆ ನಶಿಸಿ ಹೋಗುವ ಹಂತಕ್ಕೆ ಬಂದಿವೆ.**



ಅವುಗಳ ಸಂರಕ್ಷಣೆಗೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣ ಮಾಡಬೇಕು.ತಾಲೂಕಿನ ಪ್ರತ್ಯೇಕವಾಗಿ 2 ಸಕ್ಕರೆ ಕಾರ್ಖಾನೆಗಳಿರುವುದ-ರಿಂದ ಅವುಗಳ ಕಲುಷಿತ ನೀರನ್ನು ಭೀಮಾನದಿಗೆ ಹರಿಬಿಡುವುದನ್ನು ತಕ್ಷಣ ಜಿಲ್ಲಾಡಳಿತ ನಿಲ್ಲಿಸಲು ಮುಂದಾಗಬೇಕು.ರೈತರ ಅನುಕೂಲಕ್ಕಾಗಿ ಘೂಳನೂರ ಬ್ಯಾರೆಜಗೆ ಕೂಡಲೇ ಗೇಟ್ ನಿರ್ಮಿಸಿ ನೀರು ನಿಲ್ಲಿಸುವಂತೆ ಮಾಡಬೇಕು. ತಾಲೂಕಿನಲ್ಲಿ ಕೆರೆಗಳ ಸ್ವಚ್ಛತೆಗೆ ಮುಂದಾಗಿ ನೀರು ನಿಲ್ಲುವಂತೆ ಮಾಡಬೇಕು. ಭೀಮಾ ಏತನೀರಾವರಿ ಕಾಲುವೆಯನ್ನು ಸ್ವಚ್ಛಗೊಳಿಸಿ ಈ ವರ್ಷದಾರಂಭಕ್ಕೆ ನೀರು ಹರಿಸುವಂತೆ ಮಾಡಬೇಕು.

ಇಲ್ಲವಾದರೆ ತಾಲೂಕಿನಲ್ಲಿ ಉಗ್ರವಾದ ಪ್ರತಿಭಟನೆ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ತದನಂತರ ಮಾತನಾಡಿದ ಸಂಘದ ತಾಲೂಕು ಅಧ್ಯಕ್ಷ ಶ್ರೀಮಂತ ಬಿರಾದಾರ ಹಸಿರುಕ್ರಾಂತಿ ಮಾಡಿದ್ದೆವೆ ಎಂದು ಹೇಳುವ ಜನಪ್ರತಿನಿಧಿಗಳು ತಾಲೂಕಿನಲ್ಲಿ ಬರಗಾಲದ ಛಾಯೆ ಮೂಡಿಸುತ್ತಿದ್ದಾರೆ. ಅನ್ನವಿದ್ದರೂ ಊಟ ಮಾಡದ ಸ್ಥಿತಿಯಲ್ಲಿದೆ ನ್ಮಭಾಗದ ಜನರ ಬದುಕು.ತಾಲೂಕಿನಲ್ಲಿ ಜಲ ಸಂಪನ್ಮೂಲ ಇದ್ದರೂ ಸಹ ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ತಾಲೂಕಿನಾದ್ಯಂತ ಸಮಗ್ರ ನೀರಾವರಿಗೆ ಜನಪ್ರತಿನಿಧಿಗಳು ಆದ್ಯತೆ ನೀಡಬೇಕು ಇಲ್ಲವಾದರೆ ರೈತರೆಲ್ಲರೂ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದರು. ಇದೆ ಸಂದರ್ಭದಲ್ಲಿ ರೈತ ಮುಖಂಡರಾದ ರಮೇಶ ಪಾಟೀಲ,ಭೀಮರಾವ ಗೌರ,ಬಾಪುಗೌಡ ನಾರಶೇರ,ಬಸವರಾಜ ಮಂಗೆ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಟೆಕ್. ಮೆಕ್ಯಾನಿಕಲ್ ಎಂಜಿನಿಯರಿಂಗ್

ಬಿ.ಟೆಕ್. ಮೆಕ್ಯಾನಿಕಲ್ ಎಂಜಿನಿಯರಿಂಗ್ 4 ವರ್ಷಗಳ ಪದವಿಪೂರ್ವ ಎಂಜಿನಿಯರಿಂಗ್ ಕಾರ್ಯಕ್ರಮವಾಗಿದೆ .ಇದು ಯಾಂತ್ರಿಕ ವ್ಯವಸ್ಥೆಗಳು, ಉಪಕರಣಗಳು ಮತ್ತು ಯಂತ್ರೋಪಕರಣಗಳನ್ನು ವಿನ್ಯಾಸಗೊಳಿಸುವುದು, ತಯಾರಿಸುವುದು ಮತ್ತು ನಿರ್ವಹಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ಬಿ.ಟೆಕ್ ಇನ್ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನ ಪಠ್ಯಕ್ರಮವು ಉತ್ಪಾದನಾ ತಂತ್ರಜ್ಞಾನ, ಥರ್ಮೋಡೈನಾಮಿಕ್ಸ್, ಮೆಷಿನ್ ಡಿಸೈನ್, ಮೆಟೀರಿಯಲ್ ಸೈನ್ಸ್ , ಮೆಕಾಟ್ರಾನಿಕ್ಸ್, ಆಟೋಮೊಬೈಲ್ ಎಂಜಿನಿಯರಿಂಗ್, ರೊಬೊಟಿಕ್ಸ್, ಇತ್ಯಾದಿ ವಿಷಯಗಳನ್ನು ಯೋಜನಾ ಕಾರ್ಯ ಮತ್ತು ಕೈಗಾರಿಕಾ ಇಂಟರ್ನ್‌ಶಿಪ್ ಜೊತೆಗೆ ಒಳಗೊಂಡಿದೆ. ಮಾನ್ಯತೆ ಪಡೆದ ಮಂಡಳಿಯಿಂದ ಕನಿಷ್ಠ 50–60% ಸರಾಸರಿಯೊಂದಿಗೆ 12 ನೇ ತರಗತಿ PCM ಉತ್ತೀರ್ಣರಾದ ನಂತರ ನೀವು ಈ ಕೋರ್ಸ್‌ಗೆ ಅರ್ಹರಾಗಬಹುದು. ಅರ್ಹತೆಯ ಜೊತೆಗೆ, ಉನ್ನತ ಕಾಲೇಜುಗಳು ಎಇಇ ಮುಖ್ಯ, ಎಇಇ ಅಡ್ವಾನ್ಸ್ಡ್, MHT CET, KCET, AP EAMCET, COMEDK UGET, TNEA, BITSAT, VITEEE, ಇತ್ಯಾದಿ ಪ್ರವೇಶ ಪರೀಕ್ಷೆಯ ಅಂಕಗಳ ಆಧಾರದ ಮೇಲೆ ಪ್ರವೇಶವನ್ನು ತೆಗೆದುಕೊಳ್ಳುತ್ತವೆ. ಅನೇಕ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳು ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಬಿಟೆಕ್ ಅನ್ನು ನೀಡುತ್ತವೆ. ಕೆಲವು ಉನ್ನತ ಕಾಲೇಜುಗಳಲ್ಲಿ ಐಐಟಿ ಬಾಂಬೆ, ಐಐಟಿ ದೆಹಲಿ, ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯ (ಡಿಟಿಯು), ವಿಐಟಿ ವೆಲ್ಲೂರು, ಐಐಟಿ ಮದ್ರಾಸ್, ಎನ್‌ಐಟಿ ತಿರುಚ್ಚಿ , ಎಸ್‌ಆರ್‌ಎಂ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಮಣಿಪಾಲ್ ತಂತ್ರಜ್ಞಾನ ಸಂಸ್ಥೆ, ಇತ್ಯಾದಿ ಸೇರಿವೆ. ಬಿ.ಟೆಕ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರರ ಕೌಶಲ್ಯ ಮತ್ತು ಜ್ಞಾನವನ್ನು ಬಳಸಿಕೊಳ್ಳುವ ಕೆಲವು ಪ್ರಮುಖ ಕೈಗಾರಿಕೆಗಳಲ್ಲಿ ಆಟೋಮೊಬೈಲ್ಸ್, ಏರೋಸ್ಪೇಸ್, ರೊಬೊಟಿಕ್ಸ್, ಬಯೋಟೆಕ್ನಾಲಜಿ, ಆಟೊಮೇಷನ್, ಇಂಧನ ಪರಿವರ್ತನೆ, ಉತ್ಪಾದನೆ ಇತ್ಯಾದಿ ಸೇರಿವೆ. ಈ ಕೋರ್ಸ್ ನಂತರ, ಖಾಸಗಿ ಮತ್ತು ಸಾರ್ವಜನಿಕ ವಲಯಗಳೆರಡರಲ್ಲೂ ವಿವಿಧ ಜಾಗತಿಕ ನಿಗಮಗಳು ಮತ್ತು ದೊಡ್ಡ ದೇಶೀಯ ಸಂಸ್ಥೆಗಳಲ್ಲಿ ಕೆಲಸ ಮಾಡಲು ಎದುರು ನೋಡಬಹುದು.

## ದಲಿತ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರಾಗಿ ಡಾ.ಹುಸೇನಪ್ಪ ಅಮರಾಪುರ ನೇಮಕ

ನೈಜ್ಯ ದೆಸೆ ನ್ಯೂಸ್

**ದಲಿತ ಸಾಹಿತ್ಯ ಪರಿಷತ್ ರಾಯಚೂರು ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ಡಾ.ಹುಸೇನಪ್ಪ ಅಮರಾಪುರ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯ ಘಟಕದ ಅಧ್ಯಕ್ಷ ಡಾ.ಅರ್ಜುನ ಗೋಳಸಂಗಿ ತಿಳಿಸಿದ್ದಾರೆ.**

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ದಲಿತ ಸಾಹಿತ್ಯ ಪರಿಷತ್ತಿನ ವಿಭಾಗಿಯ ಸಂಯೋಜಕರಾದ ಎಚ್.ಎಫ್.ಮಸ್ಕಿಯವರ ಸೂಚನೆ ಮೇರೆಗೆ ಜಿಲ್ಲಾ ಅಧ್ಯಕ್ಷರನ್ನಾಗಿ ಮೂರು ವರ್ಷದ ಅವಧಿಗೆ ನೇಮಕ ಮಾಡಲಾಗಿದೆ. ಅವರು ದಲಿತ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೀತಿಸುವ, ಗೌರವಿಸುವ ಸಮಾನ ಮನಸ್ಕರ ಸಭೆ ಕರೆದು ಜಿಲ್ಲಾ ಹಾಗೂ ತಾಲೂಕು ಘಟಕಗಳ ಪದಾಧಿಕಾರಿಗಳನ್ನು ನೇಮಕ ಮಾಡಬೇಕು. ಪದಾಧಿಕಾರಿಗಳ ಪಟ್ಟಿಯನ್ನು ರಾಜ್ಯ ಸಮಿತಿಗೆ ಅನುಮೋದನೆಗೆ ಕಳುಹಿಸಬೇಕು. ಅಹಿಂದ ಹಿನ್ನೆಲೆಯಲ್ಲಿ ಜಿಲ್ಲಾ ದಲಿತ ಸಾಹಿತ್ಯ ಪರಿಷತ್ತನ್ನು ಸಂಘಟಿಸಬೇಕು ಎಂದು ನೇಮಕಾತಿ ಪತ್ರದಲ್ಲಿ ತಿಳಿಸಿದ್ದಾರೆ. ತಮ್ಮನ್ನು ಜಿಲ್ಲಾಧ್ಯಕ್ಷರನ್ನಾಗಿ ನೇಮಕ ಮಾಡಿದ ರಾಜ್ಯ ಅಧ್ಯಕ್ಷರಿಗೆ ಹಾಗೂ ವಿಭಾಗೀಯ ಸಂಯೋಜಕರಿಗೆ ಡಾ.ಹುಸೇನಪ್ಪ ಅಮರಾಪುರ ಅಭಿನಂದನೆ ಸಲ್ಲಿಸಿದ್ದಾರೆ. ಅವರ ಸೂಚನೆಯಂತೆ ಮುಂದಿನ ಕಾರ್ಯಯೋಜನೆ ಮಾಡುವುದಾಗಿ ತಿಳಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಪ್ರೊ.ಬಿ.ಕೃಷ್ಣಪ್ಪ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಬೇಕೆಂದು: ಶ್ಯಾಮ್ ಸುಂದರ ಕುಂಬಾದಾಳ ಒತ್ತಾಯ

ನೈಜ್ಯ ದೆಸೆ ನ್ಯೂಸ್



**ಮಾನ್ವಿ: ಪ್ರೊ.ಬಿ.ಕೃಷ್ಣಪ್ಪ ಅವಶ್ಯಕವಾಗಿದ್ದಾರೆ ಇವರ ಜಯಂತಿಯನ್ನು ಜೂ.9ರಂದು ಸರ್ಕಾರದ ವತಿಯಿಂದ ಆಚರಿಸಬೇಕೆಂದು ಬಹುಜನ ಸಮಾಜ ಪಕ್ಷದ ರಾಜ್ಯ ಕಾರ್ಯದರ್ಶಿ ಶ್ಯಾಮ್ ಸುಂದರ ಕುಂಬಾದಾಳ ಒತ್ತಾಯಿಸಿದರು.**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಹುಜನ ಸಮಾಜ ಪಕ್ಷದಿಂದ ಹಮ್ಮಿಕೊಂಡಿದ್ದ ಪ್ರೊ.ಬಿ.ಕೃಷ್ಣಪ್ಪ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕಾನ್ಸಿರಾಮರವರು 1972ರಲ್ಲಿ ಬಾಮ್ ಸೇಪ್ ಸಂಘಟನೆಯನ್ನು ದೇಶದಲ್ಲಿ ಆರಂಭಿಸಿದಾಗ ಪ್ರೊ.ಬಿ.ಕೃಷ್ಣಪ್ಪನವರು ಕರ್ನಾಟಕ ರಾಜ್ಯದಲ್ಲಿ ಇದೇ ರೀತಿಯ ದಲಿತರ ಚಳುವಳಿಯನ್ನು ಸ್ಥಾಪಿಸಿದರು, ದೇಶದಲ್ಲಿ ಬಾಮ್ ಸೇಪ್ ಸಂಘಟನೆ ಬಹುಜನ ಸಮಾಜ ಪಕ್ಷವನ್ನಾಗಿ ಸ್ಥಾಪಿಸಿದಾಗ ಕರ್ನಾಟಕ ರಾಜ್ಯದಲ್ಲಿ ಕಾನ್ಸಿರಾಮರಿಂದ ಪ್ರೇರಿತಗೊಂಡ ಪ್ರೊ.ಬಿ. ಕೃಷ್ಣಪ್ಪನವರು ತಾವು ಹಾಕಿದ ದಸಂಸ ಸಂಘಟನೆಯನ್ನು ಬಹುಜನ ಸಮಾಜ ಪಕ್ಷಕ್ಕೆ ಪ್ರಥಮವಾಗಿ ಬೆಂಬಲ ಕೊಡುವುದಲ್ಲದೆ ಬಹುಜನ ಚಳವಳಿಯ ರಾಜಕೀಯ ದಲಿತರ ಪ್ರವೇಶವನ್ನುಂಟುಮಾಡಿದ್ದಾರೆ.

ರಾಜ್ಯಕ್ಕೆ ದಲಿತರ ರಾಜಕೀಯ ಪ್ರವೇಶವನ್ನು ಮುಂದಾಳಾಗಿ ಒಪ್ಪಿಕೊಂಡು ರಾಜಕೀಯ ನೆಲೆಯನ್ನು ಕಂಡುಕೊಟ್ಟ ರಾಜ್ಯದ ಈ ಮಹಾನ್ ನಾಯಕರಿಂದ ಇಂದು ನಮ್ಮೆಲ್ಲರಿಗೆ ರಾಜಕೀಯ ಸ್ಥಾನಮಾನಗಳು ಸಿಗುತ್ತಿವೆ, ಮಹಾನ್ ದಲಿತ ನಾಯಕರಾದ ಪ್ರೊ.ಬಿ.ಕೃಷ್ಣಪ್ಪರವರ ಪರವಾಗಿರುವ ಸಾಹಿತಿಗಳು, ಚಿಂತಕರು, ದಲಿತ ನಾಯಕರು ಇನ್ನುವರೆಗೂ ರಾಜ್ಯದಲ್ಲಿ ಚಳುವಳಿಯನ್ನು ಮುನ್ನಡೆಸುತ್ತಿದ್ದಾರೆ ಎಂದ ಅವರು ಇವರ ಪ್ರತಿಮೆಯನ್ನು ಸರ್ಕಾರದ ಕೇಂದ್ರ ಬಿಂದುವಾಗಿರುವ ವಿಧಾನಸೌಧ ಮುಂಭಾಗದಲ್ಲಿ ಸ್ಥಾಪಿಸಿ ದಲಿತರ ರಾಜಕೀಯ ಭವಿಷ್ಯವನ್ನು ಆದ್ಯತೆ ಸರ್ಕಾರಗಳು ಕೊಡಬೇಕಾಗಿತ್ತು, ದಲಿತರಿಗೆ ಇವರ ನಾಯಕತ್ವದ ಅವಶ್ಯಕತೆ ಬೇಕಾಗಿತ್ತು,

ರಾಜ್ಯದಲ್ಲಿರುವ ಎಲ್ಲಾ ದಲಿತರ ಅಭಿವೃದ್ಧಿಗಾಗಿ ರಾಜಕೀಯ ಅಭಿವೃದ್ಧಿಗಾಗಿ ಪ್ರೊ.ಬಿ.ಕೃಷ್ಣಪ್ಪ ಅವಶ್ಯಕವಾಗಿದ್ದಾರೆ ಇವರ ಜಯಂತಿಯನ್ನು ಜೂ.9ರಂದು ಸರ್ಕಾರದ ವತಿಯಿಂದ ಆಚರಿಸಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ಚಂದ್ರಶೇಖರ ಮಾನ್ವಿ ವಿಧಾನಸಭಾ ಕ್ಷೇತ್ರದ ಉಸ್ತುವಾರಿಗಳು, ಶಿವಲಿಂಗಯ್ಯ ಸ್ವಾಮಿ ಸಂಯೋಜಕ ಬಿ ಎಸ್ ಪಿ , ಚಂದ್ರಶೇಖರಯ್ಯ ಸ್ವಾಮಿ ನಗರ ಘಟಕ ಅಧ್ಯಕ್ಷರು, ರವೀಂದ್ರ ಜಾನಕಲ್ ದಸಂಸ ಮುಖಂಡರು, ಮಲ್ಲಿಕಾರ್ಜುನ ಜಾನಕಲ ಮಾಜಿ ಪುರಸಭೆ ಸದಸ್ಯರು, ಶರಣಯ್ಯ ಸ್ವಾಮಿ, ಖಾಸಿಂ, ಬಾಬಾ, ಚನ್ನಬಸವ ಹಡಪದ, ತಾಯಪ್ಪ ದೊಡ್ಡಿ, ಮಹಮ್ಮದ್, ಇತರರು ಉಪಸ್ಥಿತರಿದ್ದರು.

## ವೃತ್ತ ನಿರೀಕ್ಷಕಿ ಲಕ್ಷ್ಮೀದೇವಿ ನೇತೃತ್ವದಲ್ಲಿ ದಾಳಿ 4 ಲೀ ಕಳ್ಳಭಟ್ಟಿ ಹಾಗೂ ಪಲ್ಸರ್ ದ್ವಿಚಕ್ರ ವಾಹನ, ಮೂವರ ಬಂಧನ



ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಕಳ್ಳಭಟ್ಟಿ ಸರಾಯಿ ದಂಧೆಗೆ ಕಡಿವಾಣ ಹಾಕಲು ಅಬಕಾರಿ ಇಲಾಖೆ ಚುರುಕಾಗಿ ಕಾರ್ಯಾಚರಣೆ ಆರಂಭಿಸಿದೆ. ಬುಧವಾರ ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿದ ಅಧಿಕಾರಿಗಳು, ಮುದಗಲ್ ಸಮೀಪದ ಜವಾಹರ್ ನವೋದಯ ಶಾಲೆ ಕಾಂಪೌಂಡ್ ಹತ್ತಿರ ರೇಷ್ಮೆ ತಾಂಡದ ಕಚ್ಚಾ ರಸ್ತೆಯಲ್ಲಿ ಬೈಕ್‌ನಲ್ಲಿ ಸಾಗಾಣಿಕೆ ಮಾಡುತ್ತಿದ್ದ ಮೂವರನ್ನು ಬಂಧಿಸಿದ್ದಾರೆ.**

ಈ ಕಾರ್ಯಾಚರಣೆ ಅಬಕಾರಿ ಇಲಾಖೆ ಕರ್ನಾಟಕ ವತಿಯಿಂದ ಕೈಗೊಳ್ಳಲಾಗಿದ್ದು, ಅಪರ ಆಯುಕ್ತರು (ಜಾರಿ ಮತ್ತು ಅಪರಾಧ) ಕೇಂದ್ರ ಬೆಳಗಾವಿ ಅವರ ಆದೇಶದಂತೆ ಹಾಗೂ ಕಲಬುರ್ಗಿ ವಿಭಾಗದ ಜಂಟಿ ಆಯುಕ್ತರು, ರಾಯಚೂರು ಜಿಲ್ಲೆಯ ಉಪ ಆಯುಕ್ತರು ಮತ್ತು ಉಪ ಅಧೀಕ್ಷಕರ ಮಾರ್ಗದರ್ಶನದಲ್ಲಿ ದಾಳಿ ನಡೆದಿದೆ. ಅಬಕಾರಿ ನಿರೀಕ್ಷಕರ ನೇತೃತ್ವದಲ್ಲಿ ಉಪ ನಿರೀಕ್ಷಕರು, ಕಚೇರಿ ಸಿಬ್ಬಂದಿ ಮತ್ತು ಗೃಹರಕ್ಷಕ ದಳದ ಸಹಯೋಗದಲ್ಲಿ ಕಾರ್ಯಾಚರಣೆ ನಡೆಸಿ, ರೇಷ್ಮೆ ತಾಂಡದಿಂದ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಿಸುತ್ತಿದ್ದ ಬಜಾಜ್ ಪಲ್ಸರ್ – 125 (ನಂ. –36–6609) ದ್ವಿಚಕ್ರ ವಾಹನವನ್ನು ತಪಾಸಣೆ ಮಾಡಲಾಗಿದೆ.

ಈ ವೇಳೆ ಮರಿಯಮ್ಮನಹಳ್ಳಿ ಗ್ರಾಮದ ರಾಜು (ತಂದೆ: ಮರಿಯಪ್ಪ), ಮತಿಹಾಸ (ತಂದೆ: ಬಾಲಪ್ಪ ಉಯ್ಯಾಲ) ಹಾಗೂ ದೇಶಪ್ಪ (ತಂದೆ: ಬಸ್ತನಪ್ಪ) ಎಂಬ ಮೂವರು ಆರೋಪಿಗಳು ಯಾವುದೇ ಪರವಾನಿಗೆ ಇಲ್ಲದೆ ಸುಮಾರು 4 ಲೀಟರ್ ಕಳ್ಳಭಟ್ಟಿ ಸರಾಯಿ ಸಾಗಾಣಿಕೆ ಮಾಡುತ್ತಿದ್ದದ್ದು ಪತ್ತೆಯಾಗಿದೆ. ಪಂಚರ ಸಮಕ್ಷಮ ಮದ್ಯವನ್ನು ವಶಪಡಿಸಿಕೊಂಡು, ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಈ ಪ್ರಕರಣದಲ್ಲಿ ಬಳಸಿದ ವಾಹನದ ಮಾಲೀಕನನ್ನು ಪತ್ತೆಹಚ್ಚುವ ಕಾರ್ಯ ಮುಂದುವರಿದಿದೆ. ಈ ಕಾರ್ಯಾಚರಣೆಯಲ್ಲಿ ಅಬಕಾರಿ ಉಪ ನಿರೀಕ್ಷಕರಾದ ಬಸವರಾಜ್, ಸಿಬ್ಬಂದಿಗಳಾದ ಮಂಜುನಾಥ್, ಮುಖ್ಯಪೇದೆ ಅಮರೇಶ್ ಉಪಸ್ಥಿತರಿದ್ದರು.

## ರಾಜಕೀಯ–ಸಾಮಾಜಿಕ ಬಿಕ್ಕಟ್ಟಿಗೆ ಮಾರ್ಕ್ಸ್‌ವಾದವೇ ಪರಿಹಾರ: ಎಂ. ಶಶಿಧರ

## ಎಸ್‌ಯುಸಿಐ (ಸಿ) ಪಕ್ಷದ 79ನೇ ಸಂಸ್ಥಾಪನಾ ದಿನಾಚರಣೆ ಆಚರಣೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬಿಕ್ಕಟ್ಟು ದಿನೇ ದಿನೇ ತೀವ್ರಗೊಳ್ಳುತ್ತಿರುವ ಇಂದಿನ ಪರಿಸ್ಥಿತಿಯಿಂದ ಹೊರಬರಲು ಮಾರ್ಕ್ಸ್‌ವಾದಿ ತತ್ವಶಾಸ್ತ್ರವೇ ಏಕೈಕ ಪರಿಹಾರ ಎಂದು ಎಸ್‌ಯುಸಿಐ (ಸಿ) ಪಕ್ಷದ ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯ ಎಂ. ಶಶಿಧರ ಅಭಿಪ್ರಾಯಪಟ್ಟರು.**




ಎಸ್‌ಯುಸಿಐ (ಸಿ) ಪಕ್ಷದ 79ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಅವರು, ಜಗತ್ತಿನಾದ್ಯಂತ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ರಾಷ್ಟ್ರಗಳಲ್ಲಿ ಆರ್ಥಿಕ ಬಿಕ್ಕಟ್ಟು ತೀವ್ರಗೊಂಡಿದ್ದು, ತಮ್ಮ ಲಾಭಕ್ಕಾಗಿ ಯುದ್ಧಗಳನ್ನು ಪ್ರೇರೇಪಿಸುವ ಮೂಲಕ ಜನಸಾಮಾನ್ಯರ ಜೀವನವನ್ನು ಸಂಕಷ್ಟಕ್ಕೆ ತಳ್ಳಲಾಗುತ್ತಿದೆ ಎಂದು ಹೇಳಿದರು. ವಿಜ್ಞಾನದ ತಳಹದಿಯ ಮೇಲೆ ನಿಂತಿರುವ ಮಾರ್ಕ್ಸ್‌ವಾದಿ ತತ್ವಶಾಸ್ತ್ರವು ಸಮಾಜ ಪರಿವರ್ತನೆಗೆ ದಾರಿದೀಪವಾಗಿದ್ದು,

ಸಮಾಜ ಬದಲಾವಣೆಗೂ ಮುನ್ನ ವ್ಯಕ್ತಿಯ ನೈತಿಕ ಮತ್ತು ಸಾಂಸ್ಕೃತಿಕ ಪರಿವರ್ತನೆ ಅಗತ್ಯವೆಂದು ಹೇಳಿದರು. ಮಾರ್ಕ್ಸ್‌ವಾದಿ ಚಿಂತಕ ಕಾಮ್ರೆಡ್ ಶಿವದಾಸ್ ಘೋಷ್ ಅವರ ಸೈದ್ಧಾಂತಿಕ ಮಾರ್ಗದರ್ಶನದ ಮೂಲಕವೇ ಶೋಷಕ ಬಂಡವಾಳಶಾಹಿ ವ್ಯವಸ್ಥೆಯನ್ನು ನಿವಾರಿಸಿ ಸಮಾಜವಾದಿ ಕ್ರಾಂತಿಯನ್ನು ಯಶಸ್ವಿಗೊಳಿಸಲು ಸಾಧ್ಯ ಎಂದು ಅವರು ತಿಳಿಸಿದರು. ದೇಶದ ವಿವಿಧ ಭಾಗಗಳಲ್ಲಿ ರೈತ–ಕಾರ್ಮಿಕರ ಹೋರಾಟಗಳು ತೀವ್ರಗೊಳ್ಳುತ್ತಿರುವುದನ್ನೂ ಉಲ್ಲೇಖಿಸಿದ ಅವರು, ಕ್ರಾಂತಿಕಾರಿ ಸಿದ್ಧಾಂತ ಮತ್ತು ನೈಜ ಕಮ್ಯುನಿಸ್ಟ್ ನಾಯಕತ್ವದ ಕೊರತೆಯಿಂದ ಜನಾಂದೋಲನಗಳು ಗುರಿ ತಲುಪುತ್ತಿಲ್ಲ ಎಂದರು. ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯೇ ಅಂತಿಮ ಪರಿಹಾರ ಎಂದು ಅಭಿಪ್ರಾಯಪಟ್ಟರು. ಯುವಜನತೆಯ ಸ್ಥಿತಿಯ ಕುರಿತು ಕಳವಳ ವ್ಯಕ್ತಪಡಿಸಿದ ಅವರು, ಆಳುವ ವರ್ಗಗಳು ಯುವಕರನ್ನು ನೈತಿಕವಾಗಿ ದುರ್ಬಲಗೊಳಿಸುವ ಪ್ರಯತ್ನ ಮಾಡುತ್ತಿವೆ ಎಂದು ಆರೋಪಿಸಿದರು.

ಕೇಂದ್ರದ ಬಿಜೆಪಿ ಸರ್ಕಾರ ಉದ್ಯೋಗ ಕಡಿತಗೊಳಿಸುತ್ತಿದ್ದು, ರಾಜ್ಯದ ಕಾಂಗ್ರೆಸ್ ಸರ್ಕಾರ ಮ್ಯಾಗ್ನೆಟ್ ಶಾಲೆಗಳ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಮೂಲಕ ಬಡವರ ಶಿಕ್ಷಣ ಹಕ್ಕಿಗೆ ಧಕ್ಕೆ ತರುತ್ತಿದೆ ಎಂದು ಟೀಕಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಡಾ. ಚಂದ್ರ ಗಿರೀಶ್ ಮಾತನಾಡಿ, 1948ರ ಏಪ್ರಿಲ್ 24ರಂದು ಕ್ರಾಂತಿಕಾರಿ ಹೋರಾಟಗಾರ ಕಾಮ್ರೆಡ್ ಶಿವದಾಸ್ ಘೋಷ್ ಎಸ್‌ಯುಸಿಐ (ಸಿ) ಪಕ್ಷವನ್ನು ಸ್ಥಾಪಿಸಿ ಕಾರ್ಮಿಕ ಹಾಗೂ ಶೋಷಿತ ವರ್ಗಗಳ ಪರ ನೈಜ ರಾಜಕೀಯ ಧ್ವನಿಯನ್ನು ನಿರ್ಮಿಸಿದರು ಎಂದು ಹೇಳಿದರು. ಅವರ ಚಿಂತನೆಗಳ ಆಧಾರದ ಮೇಲೆ ಪಕ್ಷವು ಉನ್ನತ ನೀತಿ–ಸಂಸ್ಕೃತಿ ಮೌಲ್ಯಗಳೊಂದಿಗೆ ಬೆಳೆಯುತ್ತಿದೆ ಎಂದರು.

ಕಾರ್ಯಕ್ರಮವು ಮಹಾನ್ ಮಾರ್ಕ್ಸ್‌ವಾದಿ ಚಿಂತಕ ಶಿವದಾಸ್ ಘೋಷ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಆರಂಭವಾಯಿತು. ಜಿಲ್ಲಾ ಸಮಿತಿ ಸದಸ್ಯ ವೀರೇಶ್ ಎನ್.ಎಸ್. ಪ್ರಾಸ್ತಾವಿಕವಾಗಿ ಮಾತನಾಡಿ ಪಕ್ಷದ ಸ್ಥಾಪನೆ ಹಾಗೂ ಹೋರಾಟದ ಪಯಣವನ್ನು ವಿವರಿಸಿದರು. ವೇದಿಕೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಚನ್ನಬಸವ ಜಾನೇಕಲ್, ಮಹೇಶ್ ಚೀಕಲಪರ್ವಿ, ರಾಮಣ್ಣ ಎಂ., ಅಣ್ಣಪ್ಪ ಎಸ್. ಉಪಸ್ಥಿತರಿದ್ದರು. ಪಕ್ಷದ ಸದಸ್ಯರು, ಹಿತೈಷಿಗಳು ಹಾಗೂ ಬೆಂಬಲಿಗರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## ಮಿಷನ್ ಏಡ್ಸ್ ಸುರಕ್ಷಾ ಅಭಿಯಾನ ಪರಿಣಾಮಕಾರಿ ಅನುಷ್ಠಾನಗೊಳಿಸಿ: ಜಿಲ್ಲಾಧಿಕಾರಿ ನಿತೀಶ್ ಕೆ.

ನೈಜ್ಯ ದೆಸೆ ನ್ಯೂಸ್



**ರಾಯಚೂರು: ಯಾವುದೇ ಕಾಯಿಲೆಯಾಗಿರಲಿ ಅದನ್ನು ಹರಡದಂತೆ ಮುಂಜಾಗ್ರತಾ ಕ್ರಮ ವಹಿಸುವುದು ಮುಖ್ಯವಾಗಿದೆ. ಮೊಬೈಲ್‌ನಲ್ಲಿ ಎಚ್‌ಐವಿ ಸ್ಥಿತಿಗತಿಯನ್ನು ಪರಿಶೀಲನೆಗೆ ಒಳಪಡಿಸಿಕೊಳ್ಳ ಮೂಲಕ ಜಿಲ್ಲೆಯಲ್ಲಿ ಮಿಷನ್ ಏಡ್ಸ್ ಸುರಕ್ಷಾ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕೆಂದು ಜಿಲ್ಲಾಧಿಕಾರಿ ನಿತೀಶ್ ಕೆ. ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಏಪ್ರಿಲ್ 29ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾ ಅರೋಗ್ಯ ಅಭಿಯಾನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸರ್ಕಾರವು ಸಮುದಾಯದ ಆರೋಗ್ಯ ಸಂರಕ್ಷಣೆಗೆ ಮತ್ತು ಸಮಾಜದ ಯುವ ಜನತೆಯ ಆರೋಗ್ಯ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಿ ಹೆಚ್‌ಐವಿ ಸೋಂಕನ್ನು ಆರಂಭದಲ್ಲಿಯೇ ಗುರ್ತಿಸಲು ಸರಳ ವಿಧಾನವಾದ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ವೈಯಕ್ತಿಕ ಸ್ಥಿತಿ ತಿಳಿಯಲು ಜಿಲ್ಲೆಯಾದ್ಯಂತ ವ್ಯಾಪಕ ಜಾಗೃತಿ ಮೂಡಿಸಬೇಕು ಎಂದರು. ಈಗಾಗಲೆ ವೈದ್ಯರು, ಸಿಬ್ಬಂದಿಯರು ಅಭಿಯಾನವನ್ನು ಯಶಸ್ವಿಯಾಗಿ ಕೈಗೊಂಡಿದ್ದು ,ಸಂತಸದಾಯಕವಾಗಿದೆ.

ಆದರೂ ಸಹ ಗೌಪ್ಯತೆಯೊಂದಿಗೆ ಸ್ವಯಂ ಪರೀಕ್ಷೆ ಮಾಡಿಕೊಳ್ಳಲು ಸಹಾಯಕವಾದ ಕ್ಯೂಆರ್ ಕೋಡ್ ಸ್ಕ್ಯಾನ ಮಾಡಿ ಪ್ರಶ್ನೋತ್ತರದಲ್ಲಿ ಸ್ವಯಂ ಉತ್ತರಗಳಿಂದ, ಸೋಂಕು ಹರಡಬಹುದಾದ ಸಾಧ್ಯತೆಗಳಿದ್ದಲ್ಲಿ ಕನಿಷ್ಟ ಶೇಖಡಾ 95 ರಷ್ಟು ಜನ ತಪಾಸಣೆ ಮಾಡಿಸಿಕೊಳ್ಳಲು, ಖಚಿತಪಟ್ಟ ಸೋಂಕಿತರಲ್ಲಿ ಶೇ.95 ರಷ್ಟು ಜನರನ್ನು ಎಆರ್‌ಟಿ ಕೇಂದ್ರಗಳಿಗೆ ಚಿಕಿತ್ಸೆಗೆ ಬರುವಂತೆ ಮಾಡಲು ಹಾಗೂ ಸೋಂಕಿತರಾಗಿ ಎಆರ್‌ಟಿ ಚಿಕಿತ್ಸೆ ಪಡೆಯುವರಲ್ಲಿ ಶೇ.95 ರಷ್ಟು ಜನರನ್ನು ಸದಾ ನಿಗಾವಣೆ, ಆಪ್ತ ಸಮಾಲೋಚನೆ, ಜಾಗೃತಿ ಮೂಲಕ ಚಿಕಿತ್ಸೆ ಬಿಡದಂತೆ, ವೈರಲ್ ಲೋಡ್ ಹೆಚ್ಚಾಗದಂತೆ ಹಾಗೂ ಹೈರಿಸ್ಕ್‌ನಲ್ಲಿ ಇರುವ ಜನತೆಗೆ ಮೂಲ ಉದ್ದೇಶ ತಲುಪಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ರಕ್ತದಾನ ಶಿಬಿರಗಳ ಆಯೋಜನೆಗೆ ಸೂಚನೆ: ರಾಯಚೂರು ಮತ್ತು ಸಿಂಧನೂರುನಲ್ಲಿರುವ ಬ್ಲಡ್ ಬ್ಯಾಂಕ್‌ಗಳನ್ನು ಪ್ರತಿ ತಿಂಗಳು ಶಿಬಿರ ಏರ್ಪಡಿಸಿ, ರಕ್ತದ ಕೊರತೆಯಾಗದಂತೆ ನೋಡಿಬೇಕು. ಸಂಗ್ರಹಣೆಯ 25% ರಷ್ಟು ರಿಮ್ಸ್ ಬ್ಲಡ್ ಬ್ಯಾಂಕ್‌ಗೆ ನೀಡುವ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದರು.

100 ದಿನಗಳ ಕ್ಷಯಮುಕ್ತ ಅಭಿಯಾನಕ್ಕೆ ಸೂಕ್ತ ಯೋಜನೆ ರೂಪಿಸಿ: 100 ದಿನಗಳ ಕ್ಷಯಮುಕ್ತ ಅಭಿಯಾನದಡಿ ಕ್ಷಯರೋಗ ನಿರ್ಮೂಲನೆ ಮಾಡಲು ಮಾನದಂಡದಡಿ ಗುರುತಿಸಲ್ಪಟ್ಟ 209 ಗ್ರಾಮಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕುಟುಂಬದ ಎಲ್ಲ ಸದಸ್ಯರು ಸೇರಿದಂತೆ ಸಂಪೂರ್ಣ ಜನಸಂಖ್ಯೆಯನ್ನು ಪರೀಕ್ಷಿಸಿ ಅಗತ್ಯವಿದ್ದವರಿಗೆ ಕಫ ಪರೀಕ್ಷೆ,

ಹ್ಯಾಂಡ್‌ಹೆಲ್ಡ್ ಎಕ್ಸ್‌ರೇ ಮಿಷಿನ್, ಮುಂತಾದವುಗಳಿಂದ ಪರೀಕ್ಷಿಸಿ, ಸೋಂಕು ಖಚಿತವಾದಲ್ಲಿ ಉಚಿತ ಚಿಕಿತ್ಸೆಯನ್ನು ನೀಡಿ ಗುಣಪಡಿಸಲು, ಅರ್ಹ ವ್ಯಕ್ತಿಗಳಿಗೆ ನಿಕ್ಷಯ್ ಮಿತ್ರ ಅಡಿ ದಾನಿಗಳಿಂದ ಪೌಷ್ಟಿಕ ಆಹಾರ ಒದಗಿಸಲು ಜಿಲ್ಲಾಧಿಕಾರಿಗಳು ಸೂಚಿಸಿದರು. 2030ರ ಒಳಗೆ ಕ್ಷಯರೋಗ ಮುಕ್ತ ಭಾರತದ ಗುರಿ ತಲುಪಲು ಕಂದಾಯ ಇಲಾಖೆ, ಗ್ರಾಮ ಪಂಚಾಯತ, ಸ್ಥಳೀಯ ಸಂಸ್ಥೆಗಳ, ವಿವಿಧ ಇಲಾಖೆಗಳ ಸಹಕಾರ ಪಡೆದು ಯಶಸ್ವಿಗೊಳಿಸಲು ಸೂಚಿಸಿದರು.

ಗುಣಮಟ್ಟದದಿಂದ ಹೆರಿಗೆ ನಿರ್ವಹಣೆ: ಜಿಲ್ಲೆಯ ಎಲ್ಲ ಆಸ್ಪತ್ರೆಗಳಲ್ಲಿನ ಸಂಪನ್ಮೂಲಗಳ ಬಳಕೆಯಿಂದ ಗುಣಮಟ್ಟದ ಸೇವೆ ನೀಡುತ್ತಿರುವುದು ಆಶಾದಾಯಕವಾಗಿದ್ದು, ಯಾವುದೇ ಪರಿಕರ, ಉಪಕರಣಗಳ ಅಗತ್ಯತೆವಿದ್ದರೆ ನಿಯಮಾನುಸಾರ ಬೇಡಿಕೆ ಸಲ್ಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ವಿಜಯ ಶಂಕರ, ಡಿಪಿಡಿಓ ಡಾ.ಚಂದ್ರಶೇಖರಯ್ಯ ಸ್ವಾಮಿ, ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್., ಡಿಎಸ್‌ಓ ಡಾ.ಗಣೇಶ್ ಕೆ, ಡಿಟಿಓ ಡಾ.ಮಹಮ್ಮದ್ ಶಾಕೀರ್ ಮೊಹಿಯುದ್ದೀನ್, ಪರಿಸರ ಇಲಾಖೆ ಅಧಿಕಾರಿ, ಸಹಾಯಕ ಔಷಧ ನಿಯಂತ್ರಕರು ಸೇರಿದಂತೆ ಜಿಲ್ಲೆಯ ಎಲ್ಲ ತಾಲೂಕಾ ಆರೋಗ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ತಾಯಿ ಮಕ್ಕಳ ಆಸ್ಪತ್ರೆಯ ಮುಖ್ಯ ಆಡಳಿತ ವೈದ್ಯಾಧಿಕಾರಿಗಳು, ಡಿಹೆಚ್‌ಇಓ, ಡಿಪಿಎಮ್, ಡಿಡಿಎಮ್, ಎನ್‌ಕ್ಯೂಎಎಸ್, ಆರ್‌ಕೆಎಸ್‌ಕೆ ಸಲಹೆಗಾರರು ಹಾಗೂ ಹೆಚ್‌ಐವಿ ಏಡ್ಸ್ ನಿರ್ಮೂಲನೆಗೆ ಕೆಲಸ ಮಾಡುತ್ತಿರುವ ಸಂಘಟನೆಗಳ ಪದಾಧಿಕಾರಿಗಳು, ಡ್ಯಾಪ್ಕೋ ಸಿಬ್ಬಂದಿಗಳು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.